ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 115 RNI Number : KNKAN/25/A2770 04-05-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :115 ರಾಯಚೂರು 04-05-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಹೊಸಪೇಟೆ ತುಂಗಭದ್ರಾ ಜಲಾಶಯಕ್ಕೆ ಡಿಕೆಶಿ ಭೇಟಿ: 33 ಹೊಸ ಕ್ರಸ್ಟ್‌ಗೇಟ್ ಅಳವಡಿಕೆ ವೀಕ್ಷಣೆ

ವಿಜಯನಗರ ,ಮೇ.03-

ವಿಜಯನಗರ ಜಿಲ್ಲೆಯ ಹೊಸ ಪೇಟೆಯಲ್ಲಿರುವ ತುಂಗಭದ್ರಾ ಜಲಾಶಯಕ್ಕೆ ಇಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಲಾಶಯದ 19ನೇ ಕ್ರಸ್ಟ್ ಗೇಟ್ ಮುರಿದು ಹೊಸ ಗೇಟ್ ಅಳವಡಿಸಿದ ನಂತರ ಇದೇ ಮೊದಲ ಬಾರಿಗೆ ಅವರು ಡ್ಯಾಂಗೆ ಆಗಮಿಸಿದ್ದಾರೆ. ಪ್ರಾಯೋಗಿಕ ಪರೀಕ್ಷೆ ತೋರಿಸಿದ ಟಿಬಿ ಡ್ಯಾಂ ಅಧಿಕಾರಿಗಳು

ಜಲಾಶಯದ ಹೊಸ ಕ್ರಸ್ಟ್ ಗೇಟ್ ನಿರ್ಮಾಣ ಕಾಮಗಾರಿಯನ್ನು ಕೂಲಂಕಷವಾಗಿ ವೀಕ್ಷಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಟಿಬಿ ಡ್ಯಾಂ ಆಡಳಿತ ಮಂಡಳಿ ಅಧಿಕಾರಿಗಳು ಪ್ರಾಯೋಗಿಕ ಪರೀಕ್ಷೆಯನ್ನು ತೋರಿಸಿದರು.

ಎರಡು ವರ್ಷಗಳ ಹಿಂದೆ ಜಲಾಶಯದ 19ನೇ ನಂಬರಿನ ಕ್ರಸ್ಟ್ ಗೇಟ್ ಮುರಿದಿತ್ತು,

ಈ ವೇಳೆ 19ನೇ ಕ್ರಸ್ಟ್ ಗೇಟ್ ನ್ನು ಮೇಲಕ್ಕೆ ಎತ್ತುವ ಮೂಲಕ ಗೇಟ್ ಕಾರ್ಯನಿರ್ವಹಣೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಯಿತು.

ಯಶಸ್ವಿಯಾಗಿ ಪೂರ್ಣಗೊಂಡ



ಟಿಬಿ ಡ್ಯಾಂ ಗೇಟ್ ಅಳವಡಿಕೆ ಕಾರ್ಯ ನಡೆದಿತ್ತು.

ಡಿ.ಕೆ. ಶಿವಕುಮಾರ್ ಅವರು ಯುದ್ದೋಪಾದಿಯಲ್ಲಿ ಹೊಸ ಗೇಟ್ ಅಳವಡಿಸುವ ಭರವಸೆ ನೀಡಿದ್ದರು. ಎಂಜಿನಿಯರ್‌ಗಳ ನಿರಂತರ ಪರಿಶ್ರಮದಿಂದಾಗಿ ಈ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳ ಜೊತೆ ಸಚಿವರಾದ ಎನ್.ಎಸ್. ಬೋಸರಾಜು ಮತ್ತು ಶಿವರಾಜ್ ತಂಗಡಗಿ ಇದ್ದರು.

ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತ ಪತ್ರಗಳನ್ನು ತಿರುಚಿ ವ್ಯವಸ್ಥಿತ ಅಪರಾಧ : ಡಿಸಿಎಂ

ಬೆಂಗಳೂರು, ಮೇ 3-

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಅಂಚೆ ಮತ ಪತ್ರಗಳನ್ನು ತಿರುಚುವ ಮೂಲಕ ವ್ಯವಸ್ಥಿತವಾದ ಅಪರಾಧ ಚಟುವಟಿಕೆ ನಡೆಸಿರುವುದು ದೇಶದಲ್ಲೇ ದೊಡ್ಡ ಉದಾಹರಣೆಯಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ಇಡೀ ರಾತ್ರಿ ಮರು ಮತ ಎಣಿಕೆ ಸಂದರ್ಭದಲ್ಲಿನ ಬೆಳವಣಿಗೆಗಳನ್ನು ಗಮನಿಸಿದ್ದೇನೆ. ಮಾಜಿ ಶಾಸಕ ಜೀವರಾಜ್ ಅವರು, ತಮ ಬಳಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳನ್ನು

ಮೂರನೇಯ ಪುಟಕ್ಕೆ

ರಾಯಚೂರು ತಾಲ್ಲೂಕಿನ ವಿವಿಧ ಗ್ರಾ.ಪಂಗಳಿಗೆ ಜಿಲ್ಲಾ ಪಂಚಾಯತ್ ಸಿಇಓ ಭೇಟಿ

ನರೇಗಾ ಕೂಲಿಕಾರರಿಗೆ ಅಗತ್ಯ ಸೌಲಭ್ಯ ಕಲ್ಪಿಸಿ: ಸಿಇಓ ಸೂಚನೆ

ರಾಯಚೂರು: ತಾಲ್ಲೂಕಿನ ಬಿಜನಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜಲಬಂಡಾ ಗ್ರಾಮದ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಕಂದಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು, ನೆರಳು ಹಾಗೂ ಪ್ರಥಮ ಚಿಕಿತ್ಸೆ ವ್ಯವಸ್ಥೆಯನ್ನು ಪಂಚಾಯಿತಿಯಿಂದ ಕಡ್ಡಾಯವಾಗಿ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕಾಂದೂ ಅವರು ಪಿಡಿಓಗಳಿಗೆ ಸೂಚಿಸಿದರು.

ಅವರು ಇಂದು ಬಿಜನಗೇರಾ



ಹಾಗೂ ಮಿಟ್ಟಿಮಲ್ಕಾಪುರ ಗ್ರಾಮಗಳಿಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದರು.

ನರೇಗಾ ಯೋಜನೆಯಡಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಅಗತ್ಯ ಕುಡಿಯುವ ನೀರು ಸೇರಿದಂತೆ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳಿದರು.

ನಂತರ ಬಿಜನಗೇರಾ ಹಾಗೂ ಮಿಟ್ಟಿಮಲ್ಕಾಪುರ ಗ್ರಾಮಗಳಲ್ಲಿ ನಿರ್ಮಾಣವಾಗುತ್ತಿರುವ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ವೀಕ್ಷಿಸಿದರು.

ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಬೇಡಿಕೆ ವಹಿ, ಓಎಚ್‌ಟಿ ಟ್ಯಾಂಕ್‌ಗಳ ಪ್ರತಿ ತಿಂಗಳು ಸ್ವಚ್ಚತೆ, ಎಫ್‌ಟಿಕೆ ಕಿಟ್ ಮೂಲಕ ನೀರಿನ ಪರೀಕ್ಷೆಗಳನ್ನು ನಿಯಮಿತವಾಗಿ ನಡೆಸುವ ಬಗ್ಗೆ ಸೂಚನೆ ನೀಡಿದರು.

ತೆರಿಗೆ ವಸೂಲಾತಿ, ಕೆಲಸದ ಬೇಡಿಕೆ ಹಾಗೂ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಜಲಜೀವನ ಮಿಷನ್ ಯೋಜನೆಯಡಿ ಮನೆಮನೆಗೆ

ಮೂರನೇಯ ಪುಟಕ್ಕೆ

ಅಗ್ನಿ ಅವಘಡ : 20 ಕೋಳಿ, 10 ಮೇಕೆ ಸಾವು



ರಾಯಚೂರು: ತಾಲ್ಲೂಕಿನ ಬಿಜನಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಜಲಬಂಡಾ ಗ್ರಾಮದ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಕಂದಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು, ನೆರಳು ಹಾಗೂ ಪ್ರಥಮ ಚಿಕಿತ್ಸೆ ವ್ಯವಸ್ಥೆಯನ್ನು ಪಂಚಾಯಿತಿಯಿಂದ ಕಡ್ಡಾಯವಾಗಿ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕಾಂದೂ ಅವರು ಪಿಡಿಓಗಳಿಗೆ ಸೂಚಿಸಿದರು.

ಅವರು ಇಂದು ಬಿಜನಗೇರಾ ಹಾಗೂ ಮಿಟ್ಟಿಮಲ್ಕಾಪುರ ಗ್ರಾಮಗಳಿಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದರು.

ನರೇಗಾ ಯೋಜನೆಯಡಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಅಗತ್ಯ ಕುಡಿಯುವ ನೀರು ಸೇರಿದಂತೆ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳಿದರು.

ನಂತರ ಬಿಜನಗೇರಾ ಹಾಗೂ ಮಿಟ್ಟಿಮಲ್ಕಾಪುರ ಗ್ರಾಮಗಳಲ್ಲಿ ನಿರ್ಮಾಣವಾಗುತ್ತಿರುವ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ವೀಕ್ಷಿಸಿದರು.

ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಬೇಡಿಕೆ ವಹಿ, ಓಎಚ್‌ಟಿ ಟ್ಯಾಂಕ್‌ಗಳ ಪ್ರತಿ ತಿಂಗಳು ಸ್ವಚ್ಚತೆ, ಎಫ್‌ಟಿಕೆ ಕಿಟ್ ಮೂಲಕ ನೀರಿನ ಪರೀಕ್ಷೆಗಳನ್ನು ನಿಯಮಿತವಾಗಿ

ಮೂರನೇಯ ಪುಟಕ್ಕೆ

ನಗರದಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಶಿಬಿರಗಳನ್ನು ಸದುಪಯೋಗ ಪಡೆದುಕೊಳ್ಳಿ

ರಾಯಚೂರು ಮೇ.3.

ಅಲ್ಪ ಸಂಖ್ಯಾತರು ಉಚಿತ ವೈದ್ಯಕೀಯ ಚಿಕಿತ್ಸೆ ಶಿಬಿರ ಗಳ ನ್ನು ಸದುಪಯೋಗ ಪಡೆದು ಕೊಳ್ಳುವಂತೆ ಮಹಾ ನಗರ ಪಾಲಿಕೆ ಮಾಜಿ ಉಪಾಧ್ಯಕ್ಷ ಸಾಜಿದ್ ಸಮೀರ್ ಮಾತಾನಾಡಿದರು.ಅವರಿಂದು ನಗರದ ಎಕ್ ಮಿನಾರ್ ಮಸಿದು ಬಳಿ ಇರುವ ಅರ್ ಹೆಚ್ ಹೆಲ್ತ್ ಕೇಂದ್ರದಲ್ಲಿ ಅಸಿಪ್ ಗ್ರೂಪ್ , ಜಾನಿಯ ಪೌಂಡೆಷನ್,ಇಪಾ ಪೌಂಡೆಷನ್ ವತಿಯಿಂದ ಮೇ ಗಾ ಅರೋಗ್ಯ ಬೆನಿಪಿಟ್ಸ್,ಚೆಕ್ ಅಪ್ ಕ್ಯಾಂಪ್ ಉದ್ಘಾಟಿಸಿ ಮಾತಾನಾಡಿದರು.

ಪ್ರತಿ ಒಬ್ಬರು ಬಡವರು ಅರೋಗ್ಯದ ಬಗ್ಗೆ ಗಮನ ಹರಿಸಿ



ಹೆಚ್ಚು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆ ಎಂದರು.ಇದರ ಲಾಭವನ್ನು ಪಡೆಯಲು ಕರೆ ನೀಡಿದರು.

ಸರ್ಕಾರದ ಬರುವ ಅರೋಗ್ಯದ ಯೆಜನಗಳ ಬಗ್ಗೆ ಮಾಹಿತಿ ನೀಡಿದರು.ಬೆಂಗಳೂರು, ಹೈದರಾಬಾದ್ ಇಂತಹ ಕಡೆ ಓಗಲು ಸಾದ್ಯವಾಗದ ಬಡವರಿಗೆ ಸಹಾ ಯ ಮಾಡುತ್ತವೆ ಎಂದರು.ಯು ವಕರು ದುಶ್ಚಟಗಳಂದ ದೂರ ವಿರಲು ಮನವಿ ಮಾಡಿದರು ಸಂಘ ಸಂಸ್ಥೆಗಳು ತಮ್ಮ ಸ್ವಂತ ಇಚ್ಚೆಯಿಂದ ಸೇವೆ ಸಲ್ಲಿಸಿದ್ದಾರೆ ಎಂದು ಕಿವಿ ಮಾತು ಹೇಳಿದರು.

ಸುಮಾರು 250 ಮಂದಿ ಶಿಬಿರದ ಲಾಭವನ್ನು ಪಡೆದರು. ಕಾ ರ್ಯಕ್ರಮದಲ್ಲಿ ಡಾ.ಬಾಸಿತ್ ಲತಿಪ್, ಜಾವಿದ್ ಜಬಿನ್,ಮನಿಯಾ,ಲತಿಪ್, ಹಾಫಿಜ್ ಸಾಬ್,ಹಜರತ್ ಬಾಷಾ,ಡಾ.ಕಾರ್ತಿಕ್,ಹಹಸನ್ ಮೂಲ್ಲಾ,ಹಾಸಿಪ್ ಖಾಜಿ ಬಾಗವಹಿಸಿದರು

44 ಡಿಗ್ರಿ ಬಿಸಿಲಿಗೆ ತಂಪು: ಸಿಗ್ನಲ್‌ಗಳಲ್ಲಿ ಶಾಶ್ವತ ನೆರಳಿನ ಶೆಡ್, ವಾಹನ ಸವಾರರಿಂದ ಮೆಚ್ಚುಗೆ

ರಾಯಚೂರು,ಮೇ.02-

ನಗರದಲ್ಲಿ ತಾಪಮಾನ 44 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗಿದ್ದು, ಬಿಸಿಲಿನ ತಾಪಕ್ಕೆ ವಾಹನ ಸವಾರರು ಸಂಚಾರದ ವೇಳೆ ತೀವ್ರ ಬಳಲುತ್ತಿದ್ದರು. ಇದನ್ನು ಗಮನಿಸಿದ ಮಹಾನಗರ ಪಾಲಿಕೆ ಕಳೆದ 15 ದಿನಗಳಿಂದ ಪ್ರಮುಖ ಸಿಗ್ನಲ್‌ಗಳಲ್ಲಿ ಶಾಶ್ವತ ನೆರಳಿನ ವ್ಯವಸ್ಥೆ ಕಲ್ಪಿಸುತ್ತಿದ್ದು, ವಾಹನ ಸವಾರರು ಹರ್ಷ ವ್ಯಕ್ತಪಡಿಸಿದ್ದಾರೆ.

ಮೊದಲು ಬೇಸಿಗೆಯಲ್ಲಿ ತಾತ್ಕಾಲಿಕ ನೆರಳಿನ ಪರದೆ ಅಳವಡಿಸಿ, ಬೇಸಿಗೆ ಮುಗಿ ಯುತ್ತಿದ್ದಂತೆ ತೆರವುಗೊಳಿಸಲಾಗುತ್ತಿತ್ತು. ಇದರಿಂದ ಪ್ರತಿ ವರ್ಷ ಬಿಸಿಲಿನಲ್ಲಿ ಸವಾರರು ಬಳಲುವಂತಾಗಿತ್ತು. ಈ ಬಾರಿ ಪಾಲಿಕೆ ಶಾಶ್ವತ ನೆರಳಿನ



ಶೆಡ್‌ಗಳನ್ನು ಅಳವಡಿಸುತ್ತಿರುವುದರಿಂದ ಸಿಗ್ನಲ್‌ಗಳಲ್ಲಿ ಕೆಲವು ನಿಮಿಷ ನಿಲುಗಡೆಯಾಗುವ ವಾಹನ ಸವಾರರು ತಂಪಾದ ಅನುಭವ ಪಡೆಯುತ್ತಿದ್ದಾರೆ.

ನಗರದ ಪ್ರಮುಖ ವೃತ್ತಗಳು ಹಾಗೂ ಟ್ರಾಫಿಕ್ ದಟ್ಟಣೆ ಹೆಚ್ಚಿರುವ ಸಿಗ್ನಲ್‌ಗಳಲ್ಲಿ ಹಂತಹಂತವಾಗಿ ಶೆಡ್‌ಗಳನ್ನು ಅಳವಡಿಸಲಾಗುತ್ತಿದೆ. ಸುಡು ಬಿಸಿಲಿನಿಂದ ಸ್ವಲ್ಪ ಮಟ್ಟಿಗೆ ರಕ್ಷಣೆ ಸಿಗುತ್ತಿದ್ದು, ಪಾಲಿಕೆಯ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಬೇಸಿಗೆ ಮಾತ್ರವಲ್ಲದೆ ವರ್ಷಪೂರ್ತಿ ಈ ವ್ಯವಸ್ಥೆ ಇರುವುದರಿಂದ ಅನುಕೂಲವಾಗಲಿದೆ ಎಂದು ವಾಹನ ಸವಾರರು ಅಭಿಪ್ರಾಯಪಟ್ಟಿದ್ದಾರೆ.

ನಗರದ ನಾಗರಿಕರು ಇದೇ ಮಾದರಿಯಲ್ಲಿ ಇನ್ನಷ್ಟು ಜಂಕ್ಷನ್‌ಗಳಲ್ಲಿ ಶೆಡ್ ವ್ಯವಸ್ಥೆ ಕಲ್ಪಿಸಲು ಮನವಿ ಮಾಡಿದ್ದು, ಪಾದಚಾರಿಗಳು ಹಾಗೂ ಟ್ರಾಫಿಕ್ ಪೊಲೀಸ್ ಸಿಬ್ಬಂದಿಗೂ ಈ ನೆರಳಿನ ವ್ಯವಸ್ಥೆ ಉಪಯೋಗವಾಗಲಿದೆ ಎಂದು ತಿಳಿಸಿದ್ದಾರೆ. ನಗರಾಭಿವೃದ್ಧಿಗೆ ಪೂರಕವಾದ ಇಂತಹ ಜನಪರ ಕ್ರಮಗಳು ಇನ್ನಷ್ಟು ಜಾರಿಯಾಗಲಿ ಎಂಬ ಆಶಯ ವ್ಯಕ್ತವಾಗಿದೆ.

ಚಿನ್ನದ ಗಣಿಯ ಎಐಟಿಯುಸಿ ಸಂಘಟನೆಯಿಂದ ವಿಶ್ವ ಕಾರ್ಮಿಕ ದಿನಾಚರಣೆ

ಹಟ್ಟಿ ಚಿನ್ನದ ಗಣಿ:

ಪಟ್ಟಣದ ಕಾಮ್ರೇಡ್ ಅರವಿಂದ್ ಮಳೆಬೆನ್ನೂರು ಗ್ರಂಥಾಲಯ ಹಾಗೂ ಎಐಟಿಯುಸಿ ಮುಖ್ಯ ಕಚೇರಿ ಆವರಣದಲ್ಲಿ ವಿಶ್ವ ಕಾರ್ಮಿಕರ 136ನೇ ವಿಶ್ವಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.ಸಂಜೆ 5:00 ಗಂಟೆಗೆ ಹಟ್ಟಿ ಕ್ಯಾಪಿನಿಂದ ಬೈಕ್ ರ್ಯಾಲಿ ಮಾಡಿ ಪಟ್ಟಣದ ಮುಖ್ಯ ರಸ್ತೆ ಉದ್ದಕ್ಕೂ ಘೋಷಣೆಗಳನ್ನು ಕೂಗುತ್ತಾ ಪಮನಕಲ್ಲೂರು ಕ್ರಾಸ್ ನಿಂದ ಪೈ ಭವನಕ್ಕೆ ಆಗಮಿಸಿದ ರ್ಯಾಲಿ ಕಾಮ್ರೆಡ್ ಎಜಿವಿ ಪೈರವರ ಪ್ರತಿಮೆಗೆ ಹೂವಿನ ಹಾರ ಹಾಕಿ ಗೌರವ ನಮನ ಸಲ್ಲಿಸಿ ಘೋಷಣೆಗಳನ್ನು ಕೂಗಿದರು.ನಂತರ ಎಐಟಿಯುಸಿ ಕಾರ್ಯಾಲಯಕ್ಕೆ ಆಗಮಿಸಿದ ರ್ಯಾಲಿ.ಚಿನ್ನದ ಕಾರ್ಮಿಕರೇ ನಮ್ಮ ಜೀವ,ಅವರೇ ನಮ್ಮ ಉಸಿರು,ಎಂಬ ಸಂದೇಶದ ಮೂಲಕ ಕಾರ್ಮಿಕರ ಕಲ್ಯಾಣ, ಹಕ್ಕುಗಳು ಮತ್ತು ಏಳಿಗೆಗಾಗಿ ತಮ್ಮ ಜೀವನವನ್ನೇ ಅರ್ಪಿಸಿದ ಹಟ್ಟಿ ಚಿನ್ನದ ಗಣಿಯ ಕಾಮ್ರೆಡ್ (ನಾಯಕರದ)ಕಾಮ್ರೆಡ್ ಎ ನಾರಾಯಣ್,ಕಾಮ್ರೇಡ್ ಎ ಜಿ ವಿ ಪೈ,ಕಾಮ್ರೇಡ್ ಎಂಜಿ ಹನುಮಂತರೆಡ್ಡಿ ,ಕಾಮ್ರೇಡ್ ಅರವಿಂದ್ ಮಳೆಬೆನ್ನೂರು ,ಕಾಮ್ರೆಡ್ ಹೆಚ್ ವಿ ಅನಂತ ಸುಬ್ಬರಾವ್ ,ಹಾಗೂ ಸ್ಥಳೀಯರಾದ ಕಾಮ್ರೆಡ್ ಅಮರಗುಂಡಪ್ಪ ನಿಲೋಗಿ ರವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಯುವ



ನಾಯಕ ಚಂದ್ರಶೇಖರ್ ಇವತ್ತು ಇಡೀ ಪ್ರಪಂಚ ಹಾಗೂ ದುಡಿಯುವ ವರ್ಗ ಮೇ ದಿನ ಕಾರ್ಮಿಕ ದಿನಾಚರಣೆಯನ್ನು ಆಚರಿಸುತ್ತದೆ. ಅದರಲ್ಲಿ ಮುಖ್ಯವಾಗಿ ಹಟ್ಟಿ ಚಿನ್ನದ ಗಣಿ ಎಐಟಿಯುಸಿ ಘಟಕದಿಂದ ನಾವೆಲ್ಲರೂ ಸೇರಿ ಮೇ ದಿನವನ್ನು ಆಚರಿಸುತ್ತಿದ್ದೇವೆ.ಎಲ್ಲಾ ಕಾರ್ಮಿಕರಿಗೆ ಮೇ ದಿನದ ಶುಭಾಶಯಗಳು ಕೋರುತ್ತಾ. ಕಾರ್ಮಿಕರ ಹೋರಾಟ,ತ್ಯಾಗ,ಮತ್ತು ಬಲಿದಾನದ ದಿನವನ್ನು ಮೆಲುಕು ಹಾಕುತ್ತಾ.1886 ರಲ್ಲಿ ಅಮೆರಿಕದ ಚಿಕಾಗೋ ನಗರದಲ್ಲಿ ಕಾರ್ಮಿಕರ ಕ್ರಾಂತಿವಾಯಿತು.ಆ ಕಾರ್ಮಿಕರ ಕ್ರಾಂತಿಯ ಪ್ರತಿಕವಾಗಿ ಆಗಿನ ಸಂದರ್ಭದಲ್ಲಿ ಕಾರ್ಮಿಕರು ಅನೇಕ ಹೋರಾಟಗಳನ್ನು ಮಾಡುತ್ತಿದ್ದರು. ಕಾರ್ಮಿಕರು ಪ್ರತಿ ದಿನ ಸುಮಾರು 14,16,ಗಂಟೆ ಕೆಲವೊಂದು ಸಾಲ 18 ಗಂಟೆ ವಿಶ್ರಾಂತಿ ಇಲ್ಲದೆ ದುಡಿಯುತ್ತಕ್ಕಂತ ಒಂದು ದುರಂತವಾದ ಪರಿಸ್ಥಿತಿ ಅವತ್ತಿನ ದಿನ ಕಾರ್ಮಿಕರ ವರ್ಗಕ್ಕೆ ಇತ್ತು.ಅಂತ ಸಂದರ್ಭದಲ್ಲಿ ಇಡೀ ಕಾರ್ಮಿಕ ವರ್ಗ ಅಮೆರಿಕದ ಚಿಕಾಗೋ ನಗರದಲ್ಲಿ ಸಭೆ ಸೇರಿ ಬೃಹತ್ ಹೋರಾಟ ಮಾಡಿದ ದಿನ ಮೇ 1 ಕಾರ್ಮಿಕರು ಇನ್ನು ಮುಂದೆ 14 16 18 ತಾಸು ಕೆಲಸ ಮಾಡಲ್ಲ ಯಾವುದೇ ಕಾರಣಕ್ಕೂ ಕಾರ್ಮಿಕ ವರ್ಗಕ್ಕೆ ಎಂಟು ತಾಸು ದುಡಿಯುವಂತ ಅವಧಿಯನ್ನು ಸೀಮಿತಗೊಳಿಸಬೇಕು ಎಂದು ಕಾರ್ಮಿಕ ವರ್ಗ ಹೋರಾಟ ಮಾಡಿದ ಪರಿಣಾಮ ಇವತ್ತು ಇಡೀ ಜಗತ್ತಿನ ಕಾರ್ಮಿಕರು ಎಂಟು ಗಂಟೆ ಕೆಲಸ ಮಾಡ್ತಾ ಇದ್ದಾರೆ ಅದು ಅವರ ಹೋರಾಟದ ಪ್ರತೀಕ ಎಂಬುದನ್ನು ನಾವು ನೀವೆಲ್ಲರೂ ಮರೆಯಬಾರದು ಎಂದು ಮಾತನಾಡಿದರು.ಅದೇ ರೀತಿ ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗಾಗಿ ತಮ್ಮ ಜೀವದ ಹಂಗು ತೊರೆದು ಹೋರಾಟ ಮಾಡಿದ ಹಿರಿಯ ನಾಯಕರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಮೂರನೇಯ ಪುಟಕ್ಕೆ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಶಿಕ್ಷಕ ಮತ್ತು ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ : ಬಡಿಗೇರ



ಲಿಂಗಸುಗೂರು,ಮೇ.03-

ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ರಾಯಚೂರು ಜಿಲ್ಲೆ 21ನೇ ಸ್ಥಾನವನ್ನು ಪಡೆದಿರುವುದು ಸಂತಸದ ವಿಷಯವಾಗಿದೆ.ಈ ಸಾಧನೆಗೆ ಕಾರಣರಾದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿವಿಧ ಸಂಘಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ ಎಂದು ಉಪನಿರ್ದೇಶಕ ಕೆ.ಡಿ. ಬಡಿಗೇರ ಅಭಿಪ್ರಾಯ ಪಟ್ಟರು.

ಪಟ್ಟಣದ ಪದವಿ ಪೂರ್ವ ಕಾಲೇಜ್ ನಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ವತಿಯಿಂದ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನ್ವಿ ತಾಲೂಕಿನ ಸುಖದೇವ್ ಎಂಬ ವಿದ್ಯಾರ್ಥಿ 625 ರಲ್ಲಿ 625 ಅಂಕಗಳನ್ನು ಪಡೆದು ರಾಜ್ಯದಲ್ಲೇ ಪ್ರಥಮ ಸ್ಥಾನ ಗಳಿಸಿರುವುದು ಜಿಲ್ಲೆಯ

ಮೂರನೇಯ ಪುಟಕ್ಕೆ

ಐತಿಹಾಸಿಕ. ಪೌರಾಣಿಕ.ಸಾಹಿತ್ಯ ಪರಂಪರೆ. ಭಕ್ತಿ ಸಾಹಿತ್ಯಗಳ ಗೋಷ್ಠಿ

ಡಾ.ರಾಜಕುಮಾರ್ ಕನ್ನಡ ಅಸ್ಮಿತೆ : ಬಾಳಾಸಾಹೇಬ ಲೋಕಾಪುರ



ಬಾಗಲಕೋಟೆ,ಮೇ.03-

ಕನ್ನಡಿಗರ ಬದುಕಿನ ಹಾಗೂ ಸಾಮಾಜಿಕ ಮೌಲ್ಯಗಳನ್ನು ಚಲಚಿತ್ರಗಳ ಮೂಲಕ ಗಟ್ಟಿಗೊಳಿಸಿ ಕನ್ನಡ ಸಾಂಸ್ಕೃತಿಕ ಲೋಕದ ಪರಂಪರೆಯನ್ನು ಶ್ರೀಮಂತಗೊಳಿಸಿ ಮೇರುನಟ ಡಾ. ರಾಜಕುಮಾರ್ ಕನ್ನಡ ಅಸ್ಮಿತೆಯಾಗಿದ್ದರು ಎಂದು ಕಾದಂಬರಿಕಾರ ಡಾ. ಬಾಳಾಸಾಹೇಬ ಲೋಕಾಪುರ ಹೇಳಿದರು

ಅವರು ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾ ಭವನದಲ್ಲಿ ಶನಿವಾರ ನವದೆಹಲಿ ಸಾಹಿತ್ಯ ಅಕಾಡೆಮಿ ಹಾಗೂ ಧಾರವಾಡದ ಧಾರವಾಡ ಕಟ್ಟೆ, ಕಲಾ ಮಹಾವಿದ್ಯಾಲಯ ಕನ್ನಡ ಸ್ನಾತಕೋತ್ತರ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಡಾ. ರಾಜಕುಮಾರ ಚಲನಚಿತ್ರಗಳು: ಸಾಹಿತ್ಯಾನುಸಂಧಾನ ಕಾರ್ಯಕ್ರಮದಲ್ಲಿ ಡಾ. ರಾಜಕುಮಾರ ಚಲನಚಿತ್ರಗಳು ಮತ್ತು ಐತಿಹಾಸಿಕತೆ ಕುರಿತು ಮಾತನಾಡಿದ ಅವರು ಐತಿಹಾಸಿಕ, ಪೌರಾಣಿಕಥೆ, ಭಕ್ತಿ ಪುರಾಣ ಅಂದಿನ ಕಾಲದ ಉಡುಗೆ ತೊಡುಗೆ ಎಲ್ಲವೂ ಅವರ ಸಿನಿಮಾದಲ್ಲಿ ಜನರಿಗೆ ಒಂದು ಮೌಲ್ಯಯುತವಾಗಿ ತಿಳಿಸುವ ಕೆಲಸ ಮಾಡಿವೆ, ನಟನೆಗೆ ಶಿಕ್ಷಣದ ಅವಶ್ಯಕತೆಯಿಲ್ಲ ಸ್ಪಷ್ಟವಾದ ಮಾತುಗಾರಿಕೆ, ಉಚ್ಚರ ಒಂದು ದೇವರ ವರ ಅದು ಡಾ. ರಾಜಕುಮಾರ ಅವರಿಗೆ ಇತ್ತು ಇವರು ಐತಿಹಾಸಿಕ ಸಿನಿಮಾದಲ್ಲಿ ಹೇಳುವಂತಹ ಸಂಭಾಷಣೆಯ ಮಾತಾಗುಳು ನೋಡಬಹುದು. ರಾಜನಾಗಿ, ರಾಕ್ಷಸ, ದರೋಡೆಕೋರ್, ಕಳ್ಳ, ಖಳನಾಯಕ, ಭಕ್ತನಾಗಿ, ಬಡವನಾಗಿ, ಹುಚ್ಚನಾಗಿ ಕೊನೆಗೆ ದೇವರಾಗಿ ನಟಿಸಿದಂತಹ ಏಕೈಕ ವ್ಯಕ್ತಿಯಾಗಿದ್ದಾರೆ. ಇತಿಹಾಸವನ್ನು ಓದದುವಕ್ಕಿಂತ ರಾಜಕುಮಾರ ಅವರು ನಟಿಸಿದ ರಾಘವಾಂಕ, ಕಂಠೀರವ, ವೀರಕೇಸರಿ, ಇಮ್ಮಡಿ ಪುಲಕೇಶಿ, ಸರ್ವಜ್ಞಮೂರ್ತಿ, ಶ್ರೀ ಕೃಷ್ಣದೇವರಾಯ ಮುಂತಾದ ಚಿತ್ರಗಳಲ್ಲಿ ಅವರ ಸಹಜ ನಟನೆಯಿಂದ ಇತಿಹಾಸ ತಿಳಿಸಿದ ದೊಡ್ಡ ನಟನಾಗಿ ಕನ್ನಡದ ಅಸ್ಮಿತೆಯನ್ನು ಜನರ ಮನಸ್ಸಿನಲ್ಲಿ ರೂಪಗೊಳ್ಳುವಂತೆ ಮತ್ತು ಬದುಕಿನ ಮೌಲ್ಯವನ್ನು ಕಟ್ಟಿಕೊಳ್ಳುವಂತೆ ಮಾಡಿವೆ, ಡಾ. ರಾಜಕುಮಾರ ಕನ್ನಡ ನಾಡಿನ ಅಸ್ಮಿತೆಯಾಗಿದ್ದಾರೆ ಎಂದರು.

ಶಶಿಧರ ನರೇಂದ್ರ ಅವರು ಪೌರಾಣಿಕತೆಗಳ ಕುರಿತು ಮಾತನಾಡಿ ಪೌರಾಣಿಕತೆಯ ಮೌಲ್ಯವನ್ನು ರಾಜಕುಮಾರ ಅವರು ತಮ್ಮಲ್ಲೆ ಆಹ್ವಾನಿಸಿಕೊಳ್ಳುತ್ತಿದ್ದರು. ನೀವು ಯಾವ ಜಗತ್ತಿನಲ್ಲಿ ಬದುಕುತ್ತಿದ್ದಿರೋ ಅದನ್ನು ಮೀರಿದ ಜೀವನವಿದೆ. ಲೋಕದ ಕೇಡುಗಳ ಜೊತೆಗೆ ಹೋರಾಡುವಂತಹ ಸಿನಿಮಾಗಳನ್ನು ಸಮಾಜಕ್ಕೆ ನೀಡಿದ್ದಾರೆ. ಸಾಮಾಜಿಕ ನೈತಿಕತೆಯನ್ನು ಸೃಷ್ಟಿಮಾಡುತ್ತವೆ. ಪರಂಪರೆಯ ಜೊತೆಗೆ ಇರುವ ಸಂಬಂಧವನ್ನು ಅಭಿನಯದ ಮೂಲಕ ಜನರಿಗೆ ತಿಳಿಸುತ್ತಾ ಸಾಮಾಜಿಕವಾಗಿ ಮತ್ತು ಪೌರಾಣಿಕವಾಗಿ ನಟನೆಯೊಂದಿಗೆ ಪ್ರದರ್ಶನ ಮಾಡಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಚಿತ್ರಗಳು ಮಾಡಿವೆ. ಡಾ. ರಾಜಕುಮಾರ ಅವರು ಸಂದರ್ಭನಿಷ್ಟ ಕಲಾವಿದನಾಗಿ ಹೊರಹೊಮ್ಮಿದವರು, ಕಲಾನಿಷ್ಟರಾದ ಅವರು ಯಾವುದೇ ಸಮಯದಲ್ಲಿ ಅವರ ಪಾತ್ರ ನಟನೆಯಲ್ಲಿ ಲೋಕದ ಕೇಡಕನ್ನು ಕುಟ್ಟಿ ಪುಡಿ ಮಾಡುವಂತಹ ಮೌಲ್ಯಗಳನ್ನು ಹುಟ್ಟುಹಾಕುತ್ತವೆ. ಕಥೆ, ಪುರಾಣಗಳನ್ನು ಓದುವುದುಕಿಂತ ರಾಜಕುಮಾರ ಅವರ ಸಿನಿಮಾ ನೋಡಿದರೆ ತಿಳಿದುಕೊಳ್ಳಬಹುದು ಎಂದರು.

ಸಾಹಿತ್ಯ ಪರಂಪರೆ ಕುರಿತು ಮಾತನಾಡಿದ ಬಸವರಾಜ ಡೊಣೂರ ಅವರು ಸಮಾಜವನ್ನು ಸುಧಾರಿಸುವಂತಹ ಮತ್ತು ಉತ್ಕೃಷ್ಠಗೊಳಿಸುವ ಶಕ್ತಿ ಅವರಿಗೆ ಇತ್ತು. ಕೃಷ್ಣ, ರಾಮ ಪ್ರಹ್ಲಾದ್, ಹಿರಣ್ಯಕಶ್ಯಪ್ ಮತ್ತು ಮಹಿಷಾಸುರಸುರ ಮುಂತಾದ ನಟನೆಯ ಮೂಲಕ ಜನರಲ್ಲಿ ಹೊಸ ಪ್ರಜ್ಞೆ, ಎಚ್ಚರಿಕೆ ಮೂಡಿಸುವುದರೊಂದಿಗೆ ಸಮಾಜದಲ್ಲಿ ಪರಿವರ್ತನೆಗೆ ಪರಿಣಾಮಬಿರಿದವು, ರಾಜಕುಮಾರ ಅವರ ಮೊದಲ ಚಿತ್ರ ಬೇಡರ ಕಣ್ಣಪ್ಪ ಇದು ಅವರ ಅರ್ಥಪೂರ್ಣವಾದ ಸಿನಿಮಾ. ಇಲ್ಲಿಂದ ಅವರ ವೃತ್ತಿ ಜೀವನ ಪ್ರಾರಂಭವಾಯಿತು. ಸುಮಾರು 50 ವರ್ಷದ ವೃತ್ತಿಜೀವನ ಅರ್ಥಪೂರ್ಣ ಮತ್ತು ನೈತಿಕತೆಯಿಂದ ಕೂಡಿದೆ. ರಾಜಕುಮಾರ ಅವರ ಚಲನಚಿತ್ರಗಳು ಕರ್ನಾಟಕದ ಸಂಸ್ಕೃತಿಯ ಬಗ್ಗೆ ತಿಳಿಸುತ್ತವೆ. ಇವರ 213 ಚಲನಚಿತ್ರಗಳು ತಮ್ಮದೆ ಆದಂತಹ ಮೌಲ್ಯವನ್ನು ನೀಡುತ್ತವೆ ಎಂದರು.

ಭಕ್ತಿ ಸಾಹಿತ್ಯದ ಕುರಿತು ಮಾತನಾಡಿದ ಶ್ರೀಹರಿ ಧೂಪದ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ರಾಜಕುಮಾರರ ಭಕ್ತಿ ಸಾಹಿತ್ಯ ಅಧ್ಯಯನ ಮಾಡದಿದ್ದರೆ ಅಪೂರ್ಣ ಎನಿಸುತ್ತದೆ. ಅವರು ಸಂಪೂರ್ಣ ಕವಿ, ಸಾಹಿತಿ ಅಲ್ಲದಿದ್ದರೂ ಅದಕ್ಕೆ ಸಮಾನವಾದ ಜ್ಞಾನ ಅವರಲ್ಲಿತ್ತು. ರಾಜಕುಮಾರರ ಭಕ್ತಿ ಗೀತೆಗಳು ಮತ್ತು ನಟನೆಗೆ ಅವರು ತುಂಬಿದ ಜೀವ ಕನ್ನಡ ಭಕ್ತಿ ಸಾಹಿತ್ಯ ಹಾಗೂ ಚಿತ್ರರಂಗವನ್ನು ಭಕ್ತಿಪ್ರದಾನ ಮಾಡಿದವು. ಭಕ್ತಿ ಗೀತೆಗಳು ಜನರ ಜೀವನಕ್ಕೆ ಮೌಲ್ಯಗಳನ್ನ ತರುವಂತಹ ಕಾರ್ಯ ಮಾಡುತ್ತವೆ. ರಾಜಕುಮಾರ ಅವರು ರಾಕ್ಷಸ, ರಾಜ, ಸಾಮಾನ್ಯ ವ್ಯಕ್ತಿ, ಭಕ್ತ, ದೇವರು ಕೊನೆಗೆ ಕುಷ್ಟ ರೋಗದ ಪತ್ರವನ್ನು ಬಿಡದೆ ಅಭಿನಯ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿಗಳಾದ ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್. ಆರ್. ಮುಗನೂರಮಠ, ಐಕ್ಯೂಎಸಿ ಘಟಕದ ಸಂಯೋಜಕರಾದ ಎ. ಯು. ರಾಠೋಡ್, ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ವೀಣಾ ಕಲ್ಮಠ, ಬಸವರಾಜ ಕುಂಬಾರ, ಡಾ. ರಾಜಶೇಖರ ಹಳೆಮನೆ ಎಸ್.ಡಿ ಕೆಂಗಲಗುತ್ತಿ, ನಂದಿನ ಅಂಕದ ಸೇರಿದಂತೆ ಬೋಧಕ -ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಶಾಂತಿಯ ಮಾರ್ಗದಲ್ಲಿ ನಡೆದರೆ ಮಾತ್ರ ವಿಶ್ವಶಾಂತಿ ಸಾಧ್ಯ-ಬಾಲಕೃಷ್ಣ

ವಿಜಯನಗರ ,ಮೇ.03-

ಜಗತ್ತಿಗೆ ಶಾಂತಿ ಅಹಿಂಸೆ ಮತ್ತುಕರುಣೆಯ ಸಂದೇಶ ಸಾರಿದ ಬುದ್ಧಜಯಂತಿಯಆಚರಣೆಯು ಕೇವಲ ಒಂದು ಸಂಪ್ರದಾಯವಾಗದೆ, ಬುದ್ಧರ ಬೋಧನೆ ಮತ್ತು ಆದರ್ಶಗಳನ್ನು ನಮ್ಮ ವೈಯಕ್ತಿಕಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದರಂತೆ ಶಾಂತಿ ಸನ್ಮಾರ್ಗದಲ್ಲಿ ನಡೆದಾಗ ಮಾತ್ರ ವಿಶ್ವಶಾಂತಿ ಸಾಧ್ಯ ಎಂದು ಅಪರಜಿಲ್ಲಾಧಿಕಾರಿ ಇ ಬಾಲಕೃಷ್ಣ ಬಣ್ಣಿಸಿದರು.

ನಗರದಜಿಲ್ಲಾ ಪಂಚಾಯತ್‌ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿಶನಿವಾರ ಶ್ರೀ ಭಗವಾನ್ ಬುದ್ಧಜಯಂತಿಕಾರ್ಯಕ್ರಮದಲ್ಲಿ ಬುದ್ಧನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು. ಬುದ್ಧರ ವಿಚಾರಗಳು ಇಂದಿನ ಜಾಗತಿಕ ಸಂಘರ್ಷಗಳು ದೇಶದಆಂತರಿಕ ಭಿನ್ನಾಭಿಪ್ರಾಯಗಳು ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿಅತ್ಯಂತ ಪ್ರಸ್ತುತವಾಗಿವೆ.

ರಾಜವಂಶದಲ್ಲಿ ಹುಟ್ಟಿ, ಸಕಲ ಸುಖ-ಸೌಲಭ್ಯಗಳಿದ್ದರೂ ಸಿದ್ಧಾರ್ಥನು ಅವೆಲ್ಲವನ್ನೂ ತ್ಯಜಿಸಿ ಬುದ್ಧನಾದದ್ದು ಸಮಾಜದ ಪರಿವರ್ತನೆಗಾಗಿ.ಅವರ ಈ ಚಿಂತನೆಗಳು ದೇಶ ವಿದೇಶಗಳಲ್ಲಿ ಪಸರಿಸಿವೆ. ಮನುಷ್ಯನಲ್ಲಿ ಇಂದು ಬಿಪಿ, ಶುಗರ್ ಮತ್ತು ಒತ್ತಡದಂತಹ ಆರೋಗ್ಯ ಸಮಸ್ಯೆಗಳಿಗೆ ಅತಿಯಾದ ಆಸೆ ಮತ್ತುದುರಾಸೆಯೇ ಮುಖ್ಯಕಾರಣ. ನೆರೆಹೊರೆಯವರೊಂದಿಗೆ ಜಗಳ ಅಥವಾ ಭೂಮಿಯ ಮೇಲಿನ ದುರಾಸೆಇವೆಲ್ಲವೂ ನಮ್ಮನ್ನು ನೆಮ್ಮದಿಯಿಂದದೂರ ಮಾಡುತ್ತಿವೆ. ಅಶೋಕ ಚಕ್ರವರ್ತಿಯು ಬುದ್ಧನ ಶಾಂತಿ ಸಂದೇಶದಿಂದ ಪ್ರಭಾವಿತನಾಗಿ ಬೌದ್ಧಧರ್ಮ ಪ್ರಸಾರ ಮಾಡಿದನು.ಅದು ಇಂದಿಗೂ ನಮ್ಮರಾಷ್ಟ್ರಧ್ವಜದಲ್ಲಿಗೌರವಿಸಲ್ಪಡುತ್ತಿದೆ.ಈ ನಿಟ್ಟಿನಲ್ಲಿ ಬುದ್ಧನ ವಿಚಾರಗಳನ್ನು ಕೇವಲ ಕೇಳುವುದಕ್ಕಿಂತ, ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಬದುಕಿನ ಸಾರ್ಥಕತೆಗೆದಾರಿಯಾಗಲಿದೆಎಂದರು.

ಉಪನ್ಯಾಸಕಿಡಾ.ಉಮಾ ಬುದ್ಧಜಯಂತಿಯ ಕುರಿತು ವಿಶೇಷಉಪನ್ಯಾಸ ನೀಡಿ ಮಾತನಾಡಿ, ರಾಜಕುಮಾರ ಸಿದ್ಧಾರ್ಥನು ಜಗತ್ತಿನದುಃಖಕ್ಕೆ ಮೂಲ ಕಾರಣವನ್ನು ಹುಡುಕುತ್ತಾ ಹೊರಟು, ಬೋಧಗಯಾದಲ್ಲಿಆರು ವರ್ಷಗಳ ಕಠಿಣ ತಪಸ್ಸಿನ ನಂತರಜ್ಞಾನೋದಯ ಪಡೆದು 'ಬುದ್ಧ'ನಾದನು. ಧ್ಯಾನವೆಂದರೆಏನನ್ನೋ ಪಡೆಯುವುದಲ್ಲ, ಬದಲಿಗೆ ನಮ್ಮೊಳಗಿನ ಕೋಪ, ಭಯ ಮತ್ತುಅಹಂಕಾರವನ್ನು ಕಳೆದುಕೊಂಡು ಶಾಂತಿಯನ್ನು ಪಡೆಯುವುದು. ಇಂದಿನ ಸಮಾಜದಲ್ಲಿ ಶಾಂತಿ ಮತ್ತು ಸತ್ಯ ನೆಲೆಸಲು ಬುದ್ಧ, ಬಸವಣ್ಣ ಮತ್ತುಅಂಬೇಡ್ಕರ್‌ಅವರ ಆದರ್ಶಗಳು ಹಾಗೂ ಬೋಧನೆಗಳೇ ಕಾರಣ.

ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ, ಬೌದ್ಧಧರ್ಮದ ಅಸ್ತಿತ್ವ ಮತ್ತು ಶಿಸ್ತು ಈ ಮೂರು ತತ್ವಗಳ ಮೇಲೆ ನಿಂತಿದೆ.ಮನುಷ್ಯನುಅಹಂಕಾರವನ್ನು ತ್ಯಜಿಸಿ, ಸನ್ಮಾರ್ಗದಲ್ಲಿ ನಡೆದರೆ ಮಾತ್ರ ಸತ್ಯವನ್ನುಗೆಲ್ಲಲು ಸಾಧ್ಯಎಂದರು. ಜಯಂತಿಕಾರ್ಯಕ್ರಮದಲ್ಲಿ ಸಮಾಜಕಲ್ಯಾಣ ಇಲಾಖೆ ಉಪನಿರ್ದೇಶಕ ವೈ ಎ ಕಾಳೆ, ತಹಸೀಲ್ದಾರ್ ಎಂ ಶೃತಿ, ಜಿಲ್ಲಾ ಪಂಚಾಯತ್ ಮುಖ್ಯಯೋಜನಾಧಿಕಾರಿಅನ್ನದಾನಸ್ವಾಮಿ, ಸಮಾಜದ ಮುಖಂಡ ಸೋಮಶೇಖರ್ ಬಣ್ಣದ ಮನಿ ಸೇರಿದಂತೆ ಮತ್ತಿತರರುಇದ್ದರು.



ದುಡಿಯುವ ವರ್ಗದ ಮೇಲಿನ ದಬ್ಬಾಳಿಕೆಯನ್ನು ತಡೆಗಟ್ಟಿ- ನ್ಯಾಯಾಧೀಶ ಶ್ರೀನಿವಾಸ ನವಲೆ

ಕಲಬುರಗಿ,ಮೇ.03-

ಪ್ರತಿ ವರ್ಷ ಮೇ 1 ರಂದು ಭಾರತ ಸೇರಿದಂತೆ ವಿಶ್ವದಾದ್ಯಂತ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತದೆ. ದುಡಿಯುವ ವರ್ಗದ ಮೇಲಿನ ದಬ್ಬಾಳಿಕೆಯನ್ನು ತಡೆಗಟ್ಟಿ, ಅವರ ಹಕ್ಕುಗಳ ಹಾಗೂ ಸಾಮರ್ಥ್ಯದ ಅರಿವು ಮೂಡಿಸುವುದು ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಹೇಳಿದರು.

ಶನಿವಾರ ನಗರದ ಶಹಾಬಾದ ರಸ್ತೆಯ ನಂದೂರು ವಸತಿ ಪ್ರದೇಶದ ಶ್ರೀ ವೆಂಕಟೇಶ್ವರ ಪ್ರೈಮರಿ ಸ್ಕೂಲ್‌ನಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಅಂಗವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲೂ ಕಾರ್ಮಿಕರ ಬೆವರಿನ ಶ್ರಮ ಅಡಗಿದೆ. ಕಾರ್ಮಿಕರು ತಮ್ಮ ದುಡಿಮೆಯಿಂದ ಕುಟುಂಬವನ್ನು ಪೋಷಿಸುವುದರ ಜೊತೆಗೆ ಸಂಸ್ಥೆಯ ಮತ್ತು ದೇಶದ ಅಭಿವೃದ್ಧಿಗೂ ಕಾರಣರಾಗುತ್ತಾರೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಶರಣಪ್ಪ ಆರ್. ಹಳಮನಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾರ್ಮಿಕ ದಿನಾಚರಣೆಯು ಕಾರ್ಮಿಕರ ಸಂಘಟಿತ ಚಳುವಳಿಯ ಫಲವಾಗಿ ಹುಟ್ಟಿಕೊಂಡಿದೆ. ದುಡಿಮೆಗೆ ಎಂಟು ಗಂಟೆ, ಮನರಂಜನೆಗೆ ಎಂಟು ಗಂಟೆ ಮತ್ತು ವಿಶ್ರಾಂತಿಗೆ ಎಂಟು ಗಂಟೆ ಎಂಬ ತತ್ವವನ್ನು ಇದು ಪ್ರತಿಪಾದಿಸುತ್ತದೆ. ಭಾರತದಲ್ಲಿ ಮೊದಲ ಬಾರಿಗೆ 1923ರಲ್ಲಿ ಚೆನ್ನೈನಲ್ಲಿ ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಈ ದಿನವನ್ನು ಆಚರಿಸಿತ್ತು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಘುಡ್ ಪ್ರಾ.ವೇಟ್ ಲಿಮಿಟೆಡ್, ವೆಂಕಟೇಶ್ವರ, ಮ್ಯಾನೆಜರ್ ಹೇಮಚಂದ್ರಬಾಬು, ಅಸ್ಪಾಕ್, ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರುಗಳಾದ ರವೀಂದ್ರಕುಮಾರ, ಪ್ರಸನ್ನ ಕೆ.ಎಸ್, ಕವಿತಾ, ವೆಂಕಟೇಶ್ವರ ಪ್ರಾ.ಲೀ, ಕಾರ್ಮಿಕರು ಮತ್ತು ಸಿಬ್ಬಂದಿಗಳ ಭಾಗವಹಿಸಿದರು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೋಸೈಟಿ ಯೋಜನ ನಿರ್ದೇಶಕ ಸಂತೋಷ ಕುಲಕರ್ಣಿ ಕಾರ್ಯಕ್ರಮ ಸ್ವಾಗತಿಸಿದರು. ರವೀಂದ್ರಕುಮಾರ ವಂದಿಸಿದರು.

ಶಾಂತಿ- ಅಹಿಂಸೆ ಸಾರಿದ ಬುದ್ಧನ ನಾಡು ಭಾರತ-ಮುಂಡರಗಿ ನಾಗರಾಜ



ಬಳ್ಳಾರಿ,ಮೇ 03-

ಭಾರತವು ಬುದ್ದನ ನಾಡು. ಇದು ಯಾವುದೇ ಒಂದು ಧರ್ಮಕ್ಕೆ ಸೀಮಿತವಾದ ರಾಷ್ಟ್ರವಲ್ಲ, ಬದಲಾಗಿ ಶಾಂತಿ ಮತ್ತು ಅಹಿಂಸೆಯನ್ನು ಸಾರಿದ ಬುದ್ದನ ನಾಡಾಗಿದೆ ಎಂದು ಡಾ. ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತಿಹಾಸದ ಉಲ್ಲೇಖದಂತೆ ಕ್ರಿಸ್ತಪೂರ್ವ 563ರಲ್ಲಿ ಬುದ್ದನು ಈ ದೇಶದಲ್ಲಿ ಜನಿಸಿ ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಇಂದು ಬೌದ್ಧ ಧರ್ಮವು ವಿಶ್ವದ ಮೂರನೇ ಅತಿದೊಡ್ಡ ಧರ್ಮವಾಗಿ ಹೊರಹೊಮ್ಮಿದೆ ಎಂದು ಅವರು ಸ್ಮರಿಸಿದರು.

ಗೌತಮ ಬುದ್ದನು ಯುದ್ಧಕ್ಕಿಂತ ಶಾಂತಿಯೇ ಮೇಲು ಎಂಬ ತತ್ವವನ್ನು ಅಳವಡಿಸಿಕೊಂಡಿದ್ದರು. ಶಾಕ್ಯ ರಾಜ್ಯದ ಸಿದ್ಧಾರ್ಥನಾಗಿದ್ದಾಗ, ನದಿ ನೀರಿನ ವಿವಾದದ ಕುರಿತು ನಡೆದ ಸಂಘದ ಚರ್ಚೆಯಲ್ಲಿ ಯುದ್ಧದ ಬದಲು ಶಾಂತಿ ಮಾತುಕತೆಗೆ ಒತ್ತು ನೀಡಿದ್ದರು. ಅವರ ಈ ಶಾಂತಿ ಮಂತ್ರವು ಇಂದಿನ ಜಾಗತಿಕ ಯುದ್ಧಗಳ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತ ವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೌದ್ಧಧರ್ಮದ ಜೀವಾಳವಾದ ಪಂಚಶೀಲ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕೆಂದು ಕರೆ ನೀಡಿದ ಅವರು ಬಳ್ಳಾರಿ ನಗರದ ಯಾವುದಾದರೂ ಒಂದು ಪ್ರಶಾಂತವಾದ ಪ್ರದೇಶದಲ್ಲಿ ಬುದ್ಧನ ಭವ್ಯ ಪ್ರತಿಮೆಯನ್ನು ನಿರ್ಮಾಣ ಮಾಡುವ ಆಶಯ ಹೊಂದಲಾಗಿದೆ ಎಂದರು.

ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಮಾತನಾಡಿ, ಗೌತಮ ಬುದ್ದನು ಕೇವಲ ಒಬ್ಬ ವ್ಯಕ್ತಿಯಲ್ಲ, ಆತ ಅಹಿಂಸೆ ಮತ್ತು ಶಾಂತಿಯ ಜಾಗತಿಕ ಸಂಕೇತ. ತನ್ನ 29ನೇ ವಯಸ್ಸಿನಲ್ಲೇ ರಾಜ್ಯಭೋಗ, ಪತ್ನಿ, ಮಗು ಮತ್ತು ವೈಭವದ ಜೀವನವನ್ನು ತ್ಯಜಿಸಿ ಸಮಾಜದ ಶಾಂತಿಗಾಗಿ ಹಗಲಿರುಳು ಶ್ರಮಿಸಿದ ಮಹಾನ್ ಚೇತನ ಎಂದು ತಿಳಿಸಿದರು.

ಬುದ್ಧನು ಅರಮನೆಯ ಸುಖ-ಭೋಗಗಳನ್ನು ತೊರೆದು ಅಹಿಂಸೆಯ ಮಾರ್ಗವನ್ನು ಆಯ್ದುಕೊಂಡಿದ್ದು ಇಂದಿನ ತಲೆಮಾರಿಗೆ ದೊಡ್ಡ ಪ್ರೇರಣೆ. ನಮ್ಮ ದೇಶಕ್ಕೆ ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಗಾಂಧೀಜಿ ಯಂತಹ ಮಹಾನ್ ವ್ಯಕ್ತಿಗಳು ದಾರಿದೀಪವಾಗಿದ್ದಾರೆ. ಇವರಲ್ಲಿ ಬುದ್ದನು ಪ್ರಾಚೀನ ಕಾಲದಲ್ಲೇ ಅಹಿಂಸೆಯ ಬುನಾದಿ ಹಾಕಿದವರು. ಇಂದಿನ ಅಶಾಂತಿಯ ವಾತಾವರಣ ದಲ್ಲಿ ಬುದ್ದನ ಶಾಂತಿ ಮತ್ತು ಅಹಿಂ ಸೆಯ ತತ್ವಗಳನ್ನು ಪಾಲಿಸುವುದು ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಗಾಂಧೀಜಿಯವರು ಸಮಾಜದ ವಿವಿಧ ಕಾಲಘಟ್ಟಗಳಲ್ಲಿ ಶೋಷಣೆ ಮುಕ್ತ ಹಾಗೂ ಸಮಾನತೆಯ ಸಮಾಜಕ್ಕಾಗಿ ಶ್ರಮಿಸಿದ ಮಹಾನ್ ಚೇತನಗಳು. ಅವರ ವಿಚಾರಧಾರೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಅಭಿಪ್ರಾಯಪಟ್ಟರು.

ಬುದ್ಧ ಮತ್ತು ಗಾಂಧೀಜಿ ಇಬ್ಬರೂ ಅಹಿಂಸೆಯೇ ಪರಮ ಧರ್ಮ ಎಂದು ಸಾರಿದವರು. ಸಮಾಜದಲ್ಲಿ ಶಾಂತಿ ನೆಲೆಸಲು ಸತ್ಯದ ಹಾದಿ ಅನಿವಾರ್ಯ ಎಂಬುದನ್ನು ಅವರು ಒತ್ತಿ ತಿಳಿಸಿದ್ದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ ಮತ್ತು ಚಾತುರ್ವರ್ಣ ಪದ್ದತಿಯ ವಿರುದ್ಧ ಬುದ್ಧ ಮತ್ತು ಅಂಬೇಡ್ಕರ್ ಅವರು ಧ್ವನಿ ಎತ್ತಿದರು. ಬಡವರು ಮತ್ತು ಅನಕ್ಷರಸ್ಥರನ್ನು ಮೂಢನಂಬಿಕೆಗಳಿಂದ ಹೊರತರಲು ಅವರು ಶ್ರಮಿಸಿದರು ಎಂದರು.

ಕೇವಲ ಮದುವೆಯಾಗ ದಿರುವುದು ಬ್ರಹ್ಮಚರ್ಯವಲ್ಲ, ಬದಲಾಗಿ ಎಲ್ಲಾ ವಿಷಯಗಳಲ್ಲಿ ಶಿಸ್ತು ಮತ್ತು ಕಟ್ಟುನಿಟ್ಟಾದ ಜೀವನ ನಡೆಸುವುದು ನಿಜವಾದ ಬ್ರಹ್ಮಚರ್ಯ ಎಂದು ಬುದ್ದನ ಬೋಧನೆಗಳನ್ನು ವಿಶ್ಲೇಷಿಸಿದರು.

ಬಳ್ಳಾರಿಯ ಎಸ್‌ಎಸ್‌ಎ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸೋಮನಾಥ್ ಸಿ.ಹೆಚ್ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಸಿರುಗುಪ್ಪ ದಳವಾಯಿ ಅಂಬಣ್ಣ ತಂಡ ಬುದ್ಧ ಗೀತೆಗಳನ್ನು ಪ್ರಸ್ತುತ ಪಡಿಸಿದರು.

ಮೆರವಣಿಗೆ: ಜಯಂತಿ ಅಂಗವಾಗಿ ಸಂಜೆ ಆಕರ್ಷಕ ಮೆರವಣಿಗೆ ನಡೆಯಿತು. ಮೆರವಣಿಗೆಯು ಬಳ್ಳಾರಿ ನಗರದ ಹಳೇ ಜಿಲ್ಲಾಧಿಕಾ ರಿಗಳ ಕಚೇರಿ ಆವರಣದಿಂದ ಆರಂಭಗೊಂಡು ಗಡಿಗೆ ಚನ್ನಪ್ಪ ವೃತ್ತ, ಡಾ.ರಾಜ್ ಕುಮಾರ್ ರಸ್ತೆ, ಇಂದಿರಾ ವೃತ್ತ ಮಾರ್ಗವಾಗಿ ಸಾಂಸ್ಕೃತಿಕ ಸಮುಚ್ಚಯದ ಸಭಾಂಗಣದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಕಮಲರತ್ನ ಬಂತೇಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮಾಜದ ಹಿರಿಯ ಮುಖಂಡರು, ಬುದ್ಧ ಅನುಯಾಯಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

ವಿಶ್ವದಲ್ಲಿ ಭಗವಾನ್ ಗೌತಮ್ ಬುದ್ಧರ ತತ್ವಸಿದ್ಧಾಂತಗಳ ಪ್ರಭಾವ ಅಪಾರ- ಡಿಸಿ



ಯಾದಗಿರಿ,ಮೇ.03-

ಭಗವಾನ್ ಗೌತಮ ಬುದ್ದರ ತತ್ವ ಸಿದ್ಧಾಂತಗಳು ವಿಶ್ವದಲ್ಲಿ ಪ್ರಭಾವ ಬೀರಿದ್ದು, ನಾಗರಿಕತೆ ಬದಲಾವಣೆಯಲ್ಲಿಯೂ ಅವರ ಮೂಲ ಸಿದ್ಧಾಂತ ಗಳು ಅಪಾರ ಕೊಡುಗೆ ನೀಡಿವೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು ಹೇಳಿದರು.

ನಗರದ ಲುಂಬಿನಿ ಉದ್ಯಾನವನದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ನಗರಸಭೆ ಹಾಗೂ ಭಗವಾನ್ ಬುದ್ಧಜಯಂತ್ಯೋತ್ಸವ ಸಮಿತಿ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಭಗವಾನ್ ಬುದ್ಧರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಬೋಧಿ ಸಸಿಗೆ ನೀರುಣಿಸಿ ಉದ್ಘಾಟಿಸಿ, ಭಗವಾನ್ ಬುದ್ದರ ಭಾವಚಿತ್ರ, ಹಾಗೂ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಿ ಅವರು ಮಾತನಾಡಿದರು.

ಜಾತಿ ವ್ಯವಸ್ಥೆಯನ್ನು ಪ್ರಪ್ರಥಮ ಬಾರಿಗೆ ವಿರೋಧಿಸಿದವರು ಗೌತಮ ಬುದ್ದರು. ಭಗವಾನ್ ಬುದ್ದರ ಅಹಿಂಸಾ ಮಾರ್ಗ, ತತ್ವಜ್ಞಾನವು ಎಲ್ಲರ ಜೀವನಕ್ಕೆ ಸಂದೇಶವಾಗಿದೆ. ಹದಿಮೂರನೇ ಶತಮಾನದಲ್ಲಿ ವಿಶ್ವದ ಭಾರತ, ದಕ್ಷಿಣ ಪೂರ್ವ ಏಷಿಯಾ, ಅಫ್ಘಾನಿಸ್ತಾನ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ

ಬೌದ್ದ ಧರ್ಮ ಹೆಚ್ಚಾಗಿ ಹರಡಿತ್ತು ಎಂದು ಅವರು ಸಾಮ್ರಾಟ ಅಶೋಕರ ಕಾಲಾವಧಿಯಲ್ಲಿ ಇವರ ಸಂದೇಶಗಳು, ಕ್ರಾಂತಿಕಾರಿ ವಿಚಾರ ಧಾರೆಗಳು ಸ್ಥಳಿಯ ಭಾಷೆಯಲ್ಲಿ ಎಲ್ಲೆಡೆ ವ್ಯಾಪಿಸಿದವು. ಡಾ.ಅಂಬೇಡ್ಕರ್ ಅವರ ಅವಧಿಯಲ್ಲಿ ದೇಶ, ವಿಶೇಷವಾಗಿ ಕರ್ನಾಟಕ, ಮಹಾರಾಷ್ಟ್ರದಲ್ಲೂ ಹೆಚ್ಚಿನ ಖ್ಯಾತಿ ಪಡೆದವು. ಧಿಕ್ಷಾ ಭೂಮಿಗೆ ಹೋಗುವ ನಾಗರಿಕರಿಗೂ ಸರ್ಕಾರ ಇಂದು ಅನುವು ಮಾಡಿಕೊಟ್ಟಿದ್ದು, ಈ ಧರ್ಮ ಸಮಾಜದ ಮೇಲೂ ಅಗಾಧ ವಾದ ಪ್ರಭಾವ ಬೀರುತ್ತಿದೆ ಎಂದು ಹೇಳಿದರು. ಭಗವಾನ್ ಗೌತಮ್ ಬುದ್ದರ ತತ್ವ ಸಿದ್ಧಾಂತ, ಸಂದೇಶಗಳನ್ನು ಸಮಾನತೆ, ಸರ್ವಾಂಗೀಣ ಅಭಿವೃದ್ಧಿಗೆ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಎಲ್ಲರೂ ಚಿಂತನೆ ನಡೆಸುವಂತೆ ಅವರು ಈ ಸಂದರ್ಭದಲ್ಲಿ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ, ಸಾಹಿತಿ ರವೀಂದ್ರನಾಥ ಹೊಸಮನಿ ಅವರು ಭಗವಾನ್ ಗೌತಮ್ ಬುದ್ದರ 2570ನೇ ಜಯಂ ತ್ಯೋತ್ಸವ ಇದಾಗಿದೆ. ಲುಂಬಿ ನಿವನದಲ್ಲಿ ಜನಿಸಿದ್ದ ಗೌತಮ್ ಬುದ್ಧ ಮುಂದೆ

ವಿಶ್ವಕ್ಕೆ ಶಾಂತಿ, ಜ್ಞಾನ ತೋರಿದರು. ಪಂಚಶೀಲ ತತ್ವ ಸಿದ್ಧಾಂತ , ಅಷ್ಟಾಂಗ ಮಾರ್ಗ ಹಾಗೂ 22 ಪ್ರತಿಜ್ಞೆಗಳನ್ನು ಬೋಧಿಸಿ, ಜೀವನದ ಯಶಸ್ಸಿಗೆ ದಾರಿ ತೋರಿದರು. ವಿಶ್ವಕ್ಕೆ ಜ್ಞಾನದ ಬೆಳಕನ್ನು ನೀಡಿ ಜಾತಿ, ಅಸಮಾನತೆ,ಲಿಂಗ ಅಸಮಾನತೆ, ಅಸ್ಪೃಶ್ಯತೆ ನಿವಾರಣೆ ಬಗ್ಗೆಯೂ ಸಾಮಾಜಕ್ಕೆ ಸನ್ಮಾರ್ಗ ತೋರಿದರು.ಸ್ವಾತಂತ್ರ್ಯ,ಸಮಾನತೆ, ಭ್ರಾತೃತ್ವ, ಬುದ್ದನ ಆವಶ್ಯಕತೆಗಳ ಬಗ್ಗೆಯೂ ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು, ಭಗವಾನ್ ಗೌತಮ್ ಬುದ್ಧ ವಿಶ್ವಕ್ಕೆ ಶಾಂತಿ ಸಂದೇಶ ಸಾರಿದರು.ಸತ್ಯ, ಅಹಿಂಸೆ, ಶಾಂತಿಮಂತ್ರ, ಪ್ರೀತಿ, ಕರುಣೆ, ಪ್ರಜ್ಞೆಗಳ ಬಗ್ಗೆ ದಾರಿ ತೋರಿದರು. ಬೌದ್ಧ ಧರ್ಮ ವಿಶ್ವದ ಅನೇಕ ದೇಶಗಳಲ್ಲಿ ವ್ಯಾಪಿಸಿದೆ. ಭಾರತ ಮಹಾನ್ ದೇಶ ಎಂದೆನಿಸಲು ಗೌತಮ್ ಬುದ್ಧ ಅವರು ಕಾರಣ ಎಂದು ಹೇಳಿ ಬುದ್ದನ ಆದರ್ಶ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಪಾಲಿಸಿದಲ್ಲಿ ಜೀವನ ಯಶಸ್ವಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್ ಬೌದ್ಧ ಧರ್ಮ ಗುರು ಬಂತೇಜಿ , ಭಗವಾನ್ ಗೌತಮ ಬುದ್ಧ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಬಾಬುರಾವ್ ಬುತಾಳೆ, ಉಪಸ್ಥಿತ ರಿದ್ದರು. ಮಂಜುನಾಥ ಗುರಸಣಗಿ ಸ್ವಾಗತಿಸಿದರು.ಮರೆಪ್ಪ ಚಟ್ಟರ್ಕರ್ ಕಾರ್ಯಕ್ರಮ ನಿರೂಪಿಸಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ವಂದಿಸಿದರು.ನೀಲಕಂಠ ಬಡಿಗೇರ ಹಾಗೂ ಮಹೇಶ್ ನಾಯ್ಕಲ್ ಪ್ರಾರ್ಥಿಸಿದರು. ಇಂದು ಬೆಳಿಗ್ಗೆ ಮೆರವಣಿಗೆಯು ಡಾ. ಅಂಬೇಡ್ಕರ್ ವೃತ್ತದಿಂದ, ಆರಂಭಿಸಿ ನಗರದಲ್ಲಿ ಸಂಚರಿಸಿ, ಲುಂಬಿನಿವನದವರೆಗೆ ನಡೆಸ ಲಾಯಿತು.



ಬಳ್ಳಾರಿ: ಜಿಲ್ಲಾಡಳಿತದಿಂದ ಮುಂದುವರೆದ ತೆರವು ಕಾರ್ಯಾಚರಣೆ

ಸರ್ಕಾರದ ವಶಕ್ಕೆ 15.05 ಎಕರೆ ಜಮೀನು ಸ್ವಾಧೀನ

ಬಳ್ಳಾರಿ,ಮೇ 03-

ಜಿಲ್ಲಾಡಳಿತದಿಂದ ಸರ್ಕಾರದ ಜಾಗ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆದಿದ್ದು, ಬಳ್ಳಾರಿ (ಗ್ರಾಮಾಂತರ) ಗ್ರಾಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 15.05 ಎಕರೆ ಜಮೀನನ್ನು ಜಿಲ್ಲಾಡಳಿತ ತನ್ನ ಸ್ವಾಧೀನಕ್ಕೆ ಪಡೆದುಕೊಂಡಿದೆ.

ಈಗಾಗಲೇ ಸರ್ಕಾರದ ಜಾಗ ಎಂದು ಗುರುತಿಸಲಾಗಿದ್ದ ಬಳ್ಳಾರಿ ಗ್ರಾಮಾಂತರ ವ್ಯಾಪ್ತಿಯ ಸರ್ವೆ ನಂಬರ್ 977 ರ 9.20 ಎಕರೆ, ಸರ್ವೆ ನಂಬರ್ 976 ರ 4.72 ಎಕರೆ ಮತ್ತು ಸರ್ವೆ ನಂಬರ್ 813 ರ 1.13 ಎಕರೆ ಸೇರಿದಂತೆ ಒಟ್ಟು 15.05 ಎಕರೆ ಜಮೀನುಗಳನ್ನು ಶನಿವಾರ ಅಧಿಕೃತವಾಗಿ ಜಿಲ್ಲಾಡಳಿತದ ಸುಪರ್ದಿಗೆ ಪಡೆಯಲಾಯಿತು.

ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ ಸೇರಿದಂತೆ ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಇತರರು ಇದ್ದರು.

ಒಂದನೇಯ ಪುಟದಿಂದ

ರಾಯಚೂರು ತಾಲ್ಲೂಕಿನ ವಿವಿಧ ಗ್ರಾ.ಪಂಗಳಿಗೆ ಜಿಲ್ಲಾ ಪಂಚಾಯತ್ ಸಿಇಒ ಭೇಟಿ

ನರೇಗಾ ಕೂಲಿಕಾರರಿಗೆ ಅಗತ್ಯ ಸೌಲಭ್ಯ ಕಲ್ಪಿಸಿ: ಸಿಇಒ ಸೂಚನೆ

ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ಇದೇ ವೇಳೆ ನರೇಗಾ ಕೂಲಿಕಾರರೊಂದಿಗೆ ಚರ್ಚಿಸಿ, ಪ್ರತಿಯೊಬ್ಬರೂ ವಿಮೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಚಂದ್ರಶೇಖರ ಪವಾ,ರ್ ಕಾರ್ಯನಿರ್ವಾಹಕ ಅಭಿಯಂತರು ನಿರ್ಮಿತ ಕೇಂದ್ರ ಶ್ರೀ ಮೋಹನ, ಸಹಾಯಕ ನಿರ್ದೇಶಕರು (ಗ್ರಾ.ಉ) ಶ್ರೀ ಹನುಮಂತ, ಸಹಾಯಕ ಅಭಿಯಂತರರು (ಗ್ರಾ.ಕುನೀ), ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಎಡಿಪಿಸಿ, ಡಿಎಮ್‌ಐಎಸ್, ಡಿಐಇಸಿ, ಟಿಸಿ, ಟಿಎ ಹಾಗೂ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

ಅಗ್ನಿ ಅವಘಡ : 20 ಕೋಳಿ, 10 ಮೇಕೆ ಸಾವು

ನಡೆಸುವ ಬಗ್ಗೆ ಸೂಚನೆ ನೀಡಿದರು.

ತೆರಿಗೆ ವಸೂಲಾತಿ, ಕೆಲಸದ ಬೇಡಿಕೆ ಹಾಗೂ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಜಲಜೀವನ ಮಿಷನ್ ಯೋಜನೆಯಡಿ ಮನೆಮನೆಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ಇದೇ ವೇಳೆ ನರೇಗಾ ಕೂಲಿಕಾರರೊಂದಿಗೆ ಚರ್ಚಿಸಿ, ಪ್ರತಿಯೊಬ್ಬರೂ ವಿಮೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಚಂದ್ರಶೇಖರ ಪವಾ,ರ್ ಕಾರ್ಯನಿರ್ವಾಹಕ ಅಭಿಯಂತರು ನಿರ್ಮಿತ ಕೇಂದ್ರ ಶ್ರೀ ಮೋಹನ, ಸಹಾಯಕ ನಿರ್ದೇಶಕರು (ಗ್ರಾ.ಉ) ಶ್ರೀ ಹನುಮಂತ, ಸಹಾಯಕ ಅಭಿಯಂತರರು (ಗ್ರಾ.ಕುನೀ), ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಎಡಿಪಿಸಿ, ಡಿಎಮ್‌ಐಎಸ್, ಡಿಐಇಸಿ, ಟಿಸಿ, ಟಿಎ ಹಾಗೂ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

ಚಿನ್ನದ ಗಣಿಯ ಎಐಟಿಯುಸಿ ಸಂಘಟನೆಯಿಂದ ವಿಶ್ವ ಕಾರ್ಮಿಕ ದಿನಾಚರಣೆ

ಅದೇ ರೀತಿ ಜಿಎಸ್ ಹನುಮಂತ, ಮಹಿಳಾ ಕಾರ್ಮಿಕ ಪ್ರತಿನಿಧಿಯಾದ ಶ್ರೀಮತಿ ಪೆಂಚಲಮ್ಮ, ಶಿವಾನಂದ ಇವರು ಮೇ ದಿನಾಚರಣೆ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಹಟ್ಟಿ ಪಟ್ಟಣ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಶಂಕರಗೌಡ ಬಳಗನೂ,ರ್ ಉಪಾಧ್ಯಕ್ಷರಾದ ತಿಪ್ಪಣ್ಣ ಮಾಚನೂರು,ಮನುದ್ದೀನ್ ಬೂದಿನಾಳ,ಚಂದ್ರಶೇಖ,ರ್ಗಂಗಪ್ಪ ಶಕೋದಿ,ನರಸಪ್ಪ ಬಾದರದಿನ್ನಿ ,ಅಬ್ರಾಹಿಂ, ಅಮೀರ್ ಪಾಶಾ,ಸಲೀಂ ಪಾಷಾ, ಶ್ರೀನಿವಾಸ್ ,ಪಾಮಣ್ಣ,ಇನ್ನು ಅನೇಕ ಕಾರ್ಮಿಕರು ಉಪಸ್ಥಿತರಿದ್ದರು.ಕಾರ್ಯಕ್ರಮದ ನಿರೂಪಣೆಯನ್ನು ರಂಗನಾಥ್ ನೆರವೇರಿಸಿಕೊಟ್ಟರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಶಿಕ್ಷಕ ಮತ್ತು ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ : ಬಡಿಗೇರ

ಹೆಮ್ಮೆಯ ವಿಷಯವಾಗಿದೆ. ಇಂತಹ ಸಾಧನೆಯಿಂದ ಜಿಲ್ಲೆಗೆ ಕೀರ್ತಿ ಮತ್ತಷ್ಟು ಹೆಚ್ಚಿದ್ದು, ಇದು ಎಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ಜಿಲ್ಲೆಯ ಅನೇಕ ಶಾಲೆಗಳು ಶೇ.94ರಷ್ಟು ಫಲಿತಾಂಶದೊಂದಿಗೆ ಉತ್ತಮ ಸಾಧನೆ ಮಾಡಿರುವದು, ಶಿಕ್ಷಕರ ಪರಿಶ್ರಮದ ಫಲವಾಗಿದೆ ಎಂದು ಶಿಕ್ಷಕರನ್ನು ಕೊಂಡಾಡಿದರು.

ಇದೇ ವೇಳೆ ಬಿಇಒ ಸುಜಾತ ಹೂನೂರು ಮಾತನಾಡಿ, ತಾಲೂಕಿನ ಒಟ್ಟು ಫಲಿತಾಂಶ ಉತ್ತಮವಾಗಿದ್ದು,ಇದಕ್ಕೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಮುಖ್ಯಗುರುಗಳ ಶ್ರಮವೇ ಕಾರಣವಾಗಿದೆ ಎಂದು ಹೇಳಿದರು. ತಾಲೂಕಿನ 9 ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿ ಕೀರ್ತಿಯನ್ನು ಹೆಚ್ಚಿಸಿರುವುದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಅಧ್ಯಕ್ಷ ರಾಜಶೇಖರ ದಿನ್ನಿ, ತಾಲ್ಲೂಕು ಅಧ್ಯಕ್ಷ ಶರಣಗೌಡ ಅಗಸಿಮುಂದಿನ, ಪ್ರಭುಲಿಂಗ ಗದ್ದಿ, ಬಿ,ಬಿ ಹದ್ರಾಳ, ಬಿಆರ್ ಸಿ ಹನುಮಂತಪ್ಪ ಕ್ವಾರಿ, ಬಸವರಾಜ ಗುಡಿಹಾಳ, ಜಯಶ್ರಿ, ಪರಮಣ್ಣ ನಾಯಕ ಸೇರಿದಂತೆ ಶಿಕ್ಷಕರು ಇದ್ದರು.

ತಿರುಚಿ ವ್ಯವಸ್ಥಿತ ಅಪರಾಧ : ಡಿಸಿಎಂ

ಯಾವ ರೀತಿ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬುದು ದೇಶಕ್ಕೆ ದೊಡ್ಡ ಸಾಕ್ಷಿಯಾಗಿದೆ. ಈ ಬಗ್ಗೆ ನನಗೆ ವರದಿ ಬಂದಿದೆ. ಅದನ್ನು ಅಧ್ಯಯನ ಮಾಡುತ್ತಿದ್ದೇನೆ ಎಂದರು.

ಅಂಚೆ ಮತಪತ್ರಗಳಿದ್ದ ಬಾಕ್ಸ್ ಗಳನ್ನು ತೆರೆಯುವುದು, ಮತಪತ್ರಗಳನ್ನು ತಿರುಚುವುದು ನಂತರ ನ್ಯಾಯಾಲಯಕ್ಕೆ ಹೋಗಿ ಮರು ಎಣಿಕೆ ಆದೇಶ ತರುವುದು, ವ್ಯವಸ್ಥಿತವಾದ ಹುನ್ನಾರವಾಗಿದ್ದು ಅಪರಾಧವೂ ಆಗಿದೆ ಎಂದರು.

ಈ ಹಿಂದೆ ಅವರದೇ ಏಜೆಂಟ್ ಸಮುಖದಲ್ಲಿ ಮತ ಎಣಿಕೆಯಾಗಿತ್ತು. ಆ ಸಂಬಂಧಪಟ್ಟಂತೆ ಒಪ್ಪಿತ ಸಹಿಗಳನ್ನು ಪಡೆಯಲಾಗಿತ್ತು. ಆದರೆ ಜೀವರಾಜ್ ಅವರು ಕೋರ್ಟ್‌ಗೆ ಹೋಗಿ ನಾನಾ ರೀತಿಯ ಪ್ರಯತ್ನ ಮಾಡಿದ್ದಾರೆ. ಇದರ ವಿರುದ್ಧ ಕಾನೂನು ಸಮರ ನಡೆಸಿದ್ದೇವೆ. ಸರ್ಕಾರದ ವತಿಯಿಂದಲೂ ಕಾನೂನು ಸಮರಕ್ಕೆ ಏನೆಲ್ಲಾ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಪರಿಶೀಲಿಸುವುದಾಗಿ ಹೇಳಿದರು.

ದೆಹಲಿ: ನಾಲ್ಕಂತಸ್ತಿನ ಕಟ್ಟಡದಲ್ಲಿ ಭಾರಿ ಅಗ್ನಿ ಅವಘಡ; 9 ಮಂದಿ ಸಾವು, ಹಲವರಿಗೆ ಗಾಯ



ನವದೆಹಲಿ: ಇಲ್ಲಿನ ಶಹದಾರ ಜಿಲ್ಲೆಯ ವಿವೇಕ್ ವಿಹಾರ್ ಪ್ರದೇಶದಲ್ಲಿರುವ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಇಂದು ನಸುಕಿನ ಹೊತ್ತಲ್ಲಿ ಭಾರಿ ಬೆಂಕಿ ಅನಾಹುತ ಸಂಭವಿಸಿದೆ. ಘಟನೆಯಲ್ಲಿ ಕನಿಷ್ಠ 9 ಮಂದಿ ಸಾವನ್ನಪ್ಪಿದ್ದು, 12 ಮಂದಿ ಗಾಯಗೊಂಡಿದ್ದಾರೆ.

ಅಗ್ನಿಶಾಮಕ ನಿಯಂತ್ರಣ ಕೊಠಡಿಗೆ ಬೆಳಗ್ಗೆ 3:48ಕ್ಕೆ ಮಾಹಿತಿ ಬಂದಿದೆ. ತಕ್ಷಣ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಯಿತು. ಬೆಂಕಿಯ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು 14 ಅಗ್ನಿಶಾಮಕ ದಳದ ವಾಹನಗಳನ್ನು ಸ್ಥಳಕ್ಕೆ ರವಾನಿಸಲಾಯಿತು. ಸತತ ಪರಿಶ್ರಮದ ಬಳಿಕ ಬೆಳಗ್ಗೆ 6:25ರ ಸುಮಾರಿಗೆ ಬೆಂಕಿ ನಿಯಂತ್ರಣಕ್ಕೆ ಬಂದಿದೆ. ಇನ್ನೂ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪ್ರತ್ಯಕ್ಷದರ್ಶಿ ಮಾಯಾಂಕ್ ಜೈನ್ ಅವರು ಪ್ರತಿಕ್ರಿಯಿಸಿ, ನಸುಕಿನ ಜಾವ ಬೆಂಕಿ ಹೊತ್ತಿಕೊಂಡಿರುವುದನ್ನು ಗಮನಿಸಿದ ತಕ್ಷಣ ನಾವು ಪೊಲೀಸರು ಮತ್ತು ಅಗ್ನಿಶಾಮಕ ಸೇವೆಗಳಿಗೆ ಕರೆ ಮಾಡಿದೆವು. ಬೆಳಿಗ್ಗೆ 3:52ರ ಹೊತ್ತಿಗೆ 15ರಿಂದ 20 ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಬಂದವು. ಪೊಲೀಸರು, ಅಗ್ನಿಶಾಮಕ ದಳ ಮತ್ತು ನಮ್ಮ ನಿವಾಸಿಗಳು ಒಟ್ಟಾಗಿ ಸುಮಾರು 15ರಿಂದ 20 ಜನರನ್ನು ರಕ್ಷಿಸುವಲ್ಲಿ ಯಶಸ್ವಿಯಾದೆವು ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ದೀಪಕ್ ಗಾಬಾ ಪ್ರತಿಕ್ರಿಯಿಸಿ, ಮೊದಲ ಮಹಡಿಯಲ್ಲಿ ವಾಸಿಸುತ್ತಿದ್ದ ಅರವಿಂದ್ ಜೈನ್ ಅವರ ಕುಟುಂಬದ ಐವರು ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೇ, ಮೂರನೇ ಮಹಡಿಯ ನಿವಾಸಿಗಳಾದ ನಿತಿನ್ ಜೈನ್ ಅವರ ಕುಟುಂಬದ ಮೂವರು ಮತ್ತು ಮೊದಲ ಮಹಡಿಯಲ್ಲಿ ವಾಸಿಸುತ್ತಿದ್ದ ಕುಟುಂಬದ ಇನ್ನೊಬ್ಬ ವ್ಯಕ್ತಿ ಸಾವನ್ನಪ್ಪಿದ್ದಾರೆ. ಓರ್ವ ಪೋಷಕರ ಮಡಿಲಲ್ಲಿ ಒಂದೂವರೆ ವರ್ಷದ ಮಗು ಅಂಟಿಕೊಂಡಿರುವುದು ಕಂಡುಬಂದಿದೆ. ಇದು ನಿಜಕ್ಕೂ ಹೃದಯ ವಿದ್ರಾವಕ ದೃಶ್ಯ ಎಂದು ಅವರು ಹೇಳಿದರು.

3 ಕುಟುಂಬದ 9 ಮಂದಿ ಸಾವು: ಇದೇ ವೇಳೆ ಮೂರು ಕುಟುಂಬಗಳಲ್ಲಿ ಒಟ್ಟು ಒಂಬತ್ತು ಜನರು ಈ ದುರಂತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಎಲ್ಲಾ ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಜಿಟಿಬಿ ಆಸ್ಪತ್ರೆಗೆ ಕಳುಹಿಸಲಾಗಿದೆ. ಕೆಲವು ಶವಗಳು ಸುಟ್ಟು ಕರಕಲಾಗಿದ್ದು, ಅವುಗಳನ್ನು ಗುರುತಿಸುವುದು ಅತ್ಯಂತ ಕಷ್ಟ. ಡಿಎನ್‌ಎ ಪರೀಕ್ಷೆಯಲ್ಲಿ ಮಾತ್ರ ಅವರ ಗುರುತುಗಳನ್ನು ಪತ್ತೆ ಮಾಡಬೇಕಿದೆ ಎಂದು ಮಾಹಿತಿ ನೀಡಿದರು.

ಎಸಿ ಘಟಕದಲ್ಲಿ ಸಂಭವಿಸಿದ ಸ್ಫೋಟ ಕಾರಣ?: ಎಸಿ ಘಟಕದಲ್ಲಿ ಸಂಭವಿಸಿದ ಸ್ಫೋಟ ಬೆಂಕಿಗೆ ಕಾರಣವಾಗಿರುವ ಶಂಕೆ ಇದೆ ಎಂದು ಗಾಬಾ ತಿಳಿಸಿದರು.

ಬೆಂಕಿ ಎಷ್ಟು ವೇಗವಾಗಿ ಹರಡಿತ್ತೆಂದರೆ ಅಲ್ಲಿ ಜನರಿಗೆ ಪ್ರತಿಕ್ರಿಯಿಸಲು ಅಥವಾ ತಪ್ಪಿಸಿಕೊಳ್ಳಲೂ ಯಾವುದೇ ಅವಕಾಶವೇ ಇರಲಿಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ ತುರ್ತು ರಕ್ಷಣಾ ಸಿಬ್ಬಂದಿ ಸುತ್ತಮುತ್ತಲಿನ ಪ್ರದೇಶಗಳ ಜನರನ್ನು ಸ್ಥಳಾಂತರಿಸಿದರು. ಘಟನಾ ಸ್ಥಳದಿಂದ ದೂರವಿರಲು ಮನವಿ ಮಾಡಿದರು ಎಂದು ಸ್ಥಳೀಯ ನಿವಾಸಿಗಳು ಹೇಳಿದರು.

4 ರಂದು ತೋವಿವಿಯಲ್ಲಿ ಮತ ಎಣಿಕೆ :ಮೊಬೈಲ್ ಫೋನ್ ನಿರ್ಬಂಧ

ಮತ ಎಣಿಕೆಗೆ ಸಕಲ ಸಜ್ಜು : ಡಿಸಿ ಸಂಗಪ್ಪ



ಬಾಗಲಕೋಟೆ, ಮೇ 03–

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ ಮೇ 4 ರಂದು ತೋಟಗಾರಿಕೆ ವಿಜ್ಞಾನ ಗಳ ವಿಶ್ವವಿದ್ಯಾಲಯದಲ್ಲಿ ಬೆಳಿಗ್ಗೆ 8 ರಿಂದ ಮತ ಎಣಿಕೆ ಕಾರ್ಯ ನಡೆ ಯಲಿದ್ದು, ಮತ ಎಣಿಕೆಗೆ ಸಕಲ ಸಜ್ಜುಗೊಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮತ ಎಣಿಕೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮತ ಎಣಿಕೆ ಕಾರ್ಯ ನಡೆಯಲಿದ್ದು, ಜಿಲ್ಲಾಡಳಿತದಿಂದ ಎಲ್ಲ ರೀತಿಯ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳ ಲಾಗಿದೆ. ಮತ ಎಣಿಕೆ ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಗಲಿದ್ದು, ಅಭ್ಯರ್ಥಿಗಳು, ಚುನಾವಣಾ ಏಜೆಂಟರು ಹಾಗೂ ಮತ ಎಣಿಕೆ ಏಜೆಂಟರುಗಳು ಅಂದು ಬೆಳಿಗ್ಗೆ 7 ಗಂಟೆಗೆ ಹಾಜರಿರಲು ತಿಳಿಸಲಾಗಿದೆ. ಭದ್ರತಾ ಕೊಠಡಿಯನ್ನು ಬೆಳಿಗ್ಗೆ 7 ಗಂಟೆಗೆ ಚುನಾವಣಾ ವೀಕ್ಷಕರ, ಅಭ್ಯರ್ಥಿಗಳ, ಏಜೆಂಟರ ಸಮ್ಮುಖದಲ್ಲಿ ತೆರೆಯಲಾಗುತ್ತಿದೆ ಎಂದರು.

ಇವಿಎಂ ಮತ ಎಣಿಕೆ ಕಾರ್ಯಕ್ಕಾಗಿ ನೆಲ ಮಹಡಿಯ ರೂನಂ.4 ರಲ್ಲಿ 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಂಚೆ ಮತ ಪತ್ರಗಳ ಎಣಿಕೆಗಾಗಿ ನೆಲ ಮಹಡಿಯ 9ರ ಕೊಠಡಿಯಲ್ಲಿ ಒಂದು ಟೇಬಲ್ ಹಾಗೂ ಇಟಿಪಿಬಿಎಸ್ ಸ್ಕ್ಯಾನಿಂಗ್‌ಕ್ಕಾಗಿ ಕೊಠಡಿ ಸಂ.9 ರಲ್ಲಿ ಒಂದು ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ತಲಾ ಒಬ್ಬರು ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ಅಬ್ಸ ರವರ ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಓರ್ವ ಸಹಾಯಕ ಚುನಾವಣಾಧಿಕಾರಿಗಳು ಇರುತ್ತಾರೆ ಎಂದು ತಿಳಿಸಿದರು.

ಸೇವಾ ಮತದಾರರಿಂದ ಸ್ವೀಕರಿಸಲ್ಪಡುವ ಅಂಚೆ ಮತಪತ್ರಗಳ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಸಲುವಾರಿ ಒಂದು ಟೇಬಲ್‌ಗಳನ್ನು ಮಾಡಲಾಗಿದ್ದು, ಓರ್ವ ಸ್ಕ್ಯಾನಿಂಗ್ ಮೇಲ್ವಿಚಾರಕರು, ಓರ್ವ ಅಸಿಸ್ಟಂಟ್ ಹಾಗೂ ಇಬ್ಬರು ಸಹಾಯಕ ಚುನಾ ವಣಾಧಿಕಾರಿಗಳನ್ನು ನೇಮಿಸಲಾ ಗಿದೆ. ಕಾಯ್ದಿಟ್ಟ ಸಿಬ್ಬಂದಿಗಳು ಸೇರಿದಂತೆ ಎಣಿಕೆ ಕಾರ್ಯಕ್ಕೆ ಒಟ್ಟು 63 ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಮತ ಎಣಿಕೆ ಕೇಂದ್ರ ದಲ್ಲಿ ಸುತ್ತುವಾರು ಮತ ಎಣಿಕೆ ಯಾದ ವಿವರವನ್ನು ಪಬ್ಲಿಕ್ ಅಡ್ರೇಸ್ ಸಿಸ್ಟಮ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಅಭ್ಯರ್ಥಿ, ಅಭ್ಯರ್ಥಿ ಏಜೆಂಟರಿಗೆ ಮತ ಎಣಿಕೆ ಪೂರ್ವ ದಿಕ್ಕಿನಲ್ಲಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಮತ ಎಣಿಕೆ ಏಜೆಂಟರಿಗೆ ಮುಖ್ಯ ದ್ವಾರದಲ್ಲಿ ಪ್ರವೇಶ ಇರುವದಿಲ್ಲ. ಸದರಿ ವಾಹನಗಳಿಗೆ ಮುಖ್ಯ ದ್ವಾರದ 200 ಮೀಟರ್ ಮುಂಚಿತವಾಗಿ ಇರುವ ಜಿಲ್ಲಾ ಪಶು ಸಂಗೋಪನಾ ಆಸ್ಪತ್ರೆ ಎದುರುಗಡೆ ಹೋಗುವ ರಸ್ತೆ ಮುಖಾಂತರ ಮತ ಎಣಿಕೆ ಕೇಂದ್ರದಿಂದ ಸುಮಾರು 200 ಮೀಟರ್ ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮತ ಎಣಿಕೆ ಸಿಬ್ಬಂದಿಗಳಿಗೆ ಹಾಗೂ ಮಾಧ್ಯಮದವರಿಗೆ ಮಾತ್ರ ಮುಖ್ಯ ದ್ವಾರದಿಂದ ಪ್ರವೇಶವಿರುತ್ತದೆ. ಎಣಿಕೆ ಕೇಂದ್ರದಲ್ಲಿ ಮೊಬೈಲ್ ಫೋನ್ ನಿರ್ಬಂಧಿಸಲಾ ಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾ ಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಷೇದಾಜ್ಞೆ ಜಾರಿ: ಮೇ 4ರ ಬೆಳಿಗ್ಗೆ 6 ಗಂಟೆಯಿಂದ ಮೇ 5ರ ಬೆಳಿಗ್ಗೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ನ್ನು ಜಾರಿ ಮಾಡಿ ಆದೇಶಿಸಲಾಗಿದೆ. ಅಲ್ಲದೇ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ 10 ಕಿ.ಮೀ ವ್ಯಾಪ್ತಿಯಲ್ಲಿ ಮೇ 4ರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಮಧ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟಲ್, ಕ್ಲಬ್, ಡಾಬಾ ಮತ್ತು ಇನ್ನಿತರ ಸ್ಥಳಗಳಲ್ಲಿ ಮದ್ಯ ಮಾರಾಟ ಹಾಗೂ ಸರಬರಾಜು ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ವಸತಿ ಶಾಲೆ : 100 ರಷ್ಟು ಫಲಿತಾಂಶ

ಬಾಗಲಕೋಟೆ, ಮೇ 03–

ಈ ಬಾರಿಯ ಎಸ್.ಎಸ್.ಎಲ್‌ಸಿ ಪರೀಕ್ಷೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗೆ ಒಳಪಟ್ಟಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಕ್ಕೆ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಅಭಿನಂದಿಸಿದ್ದಾರೆ.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ ಮಾದರಿಯ ಶಾಲೆಗಳಾದ ಬಾದಾಮಿ (100%) ಜಮಖಂಡಿ(98%), ಇಳಕಲ್ (97.77%), ಬನಹಟ್ಟಿ(97.05%) ಮುಧೋಳ(96.15%), ತೇರದಾಳ(96%), ಬೀಳಗಿ (95.65%), ಸೆಕ್ಟರ್ ನಂ 13 ನವನಗರ (95.83%) ಸೆಕ್ಟರ್ ನಂ.38 ನವನಗರ (95.12%) ಈ ಎಲ್ಲಾ ಶಾಲೆಯ ವಿದ್ಯಾರ್ಥಿಗಳು ಈ ಬಾರಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಅಲ್ಲದೇ ಎಪಿಜೆ ಅಬ್ದುಲ ಕಲಾಂ ಸಿ.ಬಿ.ಎಸ್.ಸಿ ಹಾಗೂ ನವನಗರ, ಗುಡೂರ್ ಎಸ್.ಸಿ (ಹುನಗುಂದ), ಬೂದಿಹಾಳ ಎಸ್‌ಎ(ಬಿಳಗಿ), ಜಮಖಂಡಿ,

ತೇರದಾಳ, ಅಲ್ಪಸಂ ಖ್ಯಾತರ ಮೋರಾರ್ಜಿ ದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳು ಮತ್ತು ಜಿಲ್ಲೆಯ ಐದು ಮೆಟ್ರಿಕ್ ಪೂರ್ವ ಅಲ್ಪಸಂಖ್ಯಾತ ವಸತಿ ನಿಲಯದ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಾರೆ.

ಶ್ರೀ ಹುಲಿಗೆಮ್ಮ ದೇವಿ ಜಾತ್ರೆ: ಪ್ರಾಣಿಬಲಿ, ಮದ್ಯಪಾನ ನಿಷೇಧಕ್ಕೆ ಕ್ರಮ ಕೈಗೊಳ್ಳಿ : ಡಿಸಿ ಡಾ.ಸುರೇಶ ಇಟ್ನಾಳ



ಕೊಪ್ಪಳ,ಮೇ.03–

ಶ್ರೀ ಕ್ಷೇತ್ರ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪ್ರಾಣಿಬಲಿ ಮತ್ತು ಮದ್ಯಪಾನವನ್ನು ನಿಷೇಧಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈಗಾಗಲೇ ಹುಲಿಗಿ ಕ್ಷೇತ್ರದಲ್ಲಿ ಪ್ರಾಣಿಬಲಿ ನಿಷೇಧ ಜಾರಿಯಲ್ಲಿದ್ದು, ಜಾತ್ರಾ ನಂತರ ಒಂದು ತಿಂಗಳ ಕಾಲ ಪ್ರಾಣಿಬಲಿ ನಡೆಯುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಬಗ್ಗೆ ವಾರ್ಷಿಕ ಜಾತ್ರೆಯಲ್ಲಿ ಕಟ್ಟುನಿಟ್ಟಿನ ಕ್ರಮಕ್ಕಾಗಿ ಹೊಸಪೇಟೆ, ಶಿವಪುರ ರಸ್ತೆ, ಹಿಟ್ನಾಟ್, ಹೊಸಪೇಟೆಯ ಹೊಸೂರಿನಿಂದ ನದಿ ಮಾರ್ಗದಲ್ಲಿ ಚಕ್ ಪೋಸ್ಟ್‌ಗಳನ್ನು ನಿರ್ಮಿಸಿ, ಕ್ಷೇತ್ರಕ್ಕೆ ಯಾವುದೇ ಪ್ರಾಣಿಗಳನ್ನು ತರದಂತೆ ಸಂಬಂಧಿಸಿದ ಪೊಲೀಸ್ ಠಾಣೆಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಪ್ರಾಣಿ ಬಲಿ ನಿಷೇಧಗೊಳಿಸಲು ಧ್ವನಿವರ್ಧಕಗಳ ಮತ್ತು ಸೂಚನಾ ಫಲಕಗಳ ಮುಖಾಂತರ ಜಾಗೃತಿ ಮೂಡಿಸಲು ಮತ್ತು ವ್ಯಾಪಕ ಪ್ರಚಾರಕ್ಕೆ ಅಗತ್ಯ ಕೈಗೊಳ್ಳಬೇಕು. ಭಕ್ತರು ದೇವಸ್ಥಾನದ ಒಳಗಡೆ ಯಾವುದೇ ಪ್ರಾಣಿಗಳನ್ನು ತರದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಕೊಪ್ಪಳ ಪೊಲೀಸ್ ಉಪ ಅಧೀಕ್ಷಕರು, ತಹಶೀಲ್ದಾರರು, ಮುನಿರಾಬಾದ್ ಪೊಲೀಸ್ ಠಾಣೆಯ ಆರಕ್ಷಕ ಠಾಣೆಯ ಆರಕ್ಷಕ ಉಪನಿರೀಕ್ಷಕರು, ಕೊಪ್ಪಳ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರು ಹಾಗೂ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು.

ಕ್ಷೇತ್ರದಲ್ಲಿ ಜಾತ್ರಾ ಸಮಯದಲ್ಲಿ ಮದ್ಯಪಾನ ನಿಷೇಧ: ಜಾತ್ರಾ ಅವಧಿಯಲ್ಲಿ ಕ್ಷೇತ್ರಕ್ಕೆ ಬರುವ ಭಕ್ತಾದಿಗಳು ಮದ್ಯಪಾನ ಮಾಡಿ ಪಾನಮತ್ತರಾಗಿ ಕ್ಷೇತ್ರದಲ್ಲಿ ಗಲಾಟೆ ಮಾಡುವ ಸಾಧ್ಯತೆ ಇರುವುದರಿಂದ, ಉಳಿದ ಎಲ್ಲಾ ಭಕ್ತರಿಗೆ ತೊಂದರೆ ಯಾಗುವುದರಿಂದ ಹಾಗೂ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತಾ ಕ್ರಮವಾಗಿ ಮದ್ಯಪಾನ ನಿಷೇದ ಮಾಡುವ ಬಗ್ಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ಹಾಜರಿದ್ದ ಕೊಪ್ಪಳ ಅಬಕಾರಿ

ಇಲಾಖೆಯ ಉಪ ಆಯುಕ್ತರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿ, ಅಲ್ಲದೇ ಹುಲಿಗಿ ಕ್ಷೇತ್ರದಲ್ಲಿರುವ ಮದ್ಯಪಾನ ಮಾರಾಟ ಅಂಗಡಿಗಳನ್ನು ಮಹಾರಥೋತ್ಸವದ ದಿನದಂದು ಹುಲಿಗಿ, ಹೊಸಳ್ಳಿ, ಸಿಂಗಾಪೂರ, ಹಿಟ್ನಾಟ್ ಗ್ರಾಮಗಳಲ್ಲಿ ಮದ್ಯಪಾನ ಮಾರಾಟ ನಿಷೇಧ ಮಾಡುವ ಬಗ್ಗೆ ಅಬಕಾರಿ ಇಲಾಖೆರವರು ಸೂಕ್ತ ಆದೇಶ ಹೊರಡಿಸುವಂತೆ ತಿಳಿಸಿದರು.

ಗ್ರಾಮ ಪಂಚಾಯತಿಯ ಗ್ರಂಥಾಲಯಗಳಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರಕ್ಕೆ ಆಹ್ವಾನ

ಯಾದಗಿರಿ : ಮೇ 03–

ಗ್ರಾಮೀಣ ಭಾಗದ ಎಲ್ಲಾ ಗ್ರಾಮ ಪಂಚಾಯತಿಯ ಗ್ರಂಥಾಲಯಗಳಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಮೇ 1 ರಿಂದ 15ರ ವರೆಗೆ ಆಯೋಜಿಸಲಾಗಿದೆ ಎಂದು ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ತಿಳಿಸಿದ್ದಾರೆ.

ಶಿಬಿರವನ್ನು ವ್ಯವಸ್ಥಿತವಾಗಿ 2026ರ ಮೇ 1 ರಿಂದ ರಿಂದ 15ರ ವರೆಗೆ ಜರುಗುವಂತೆ ಕ್ರಮವಹಿಸಲು ಹಾಗೂ ಶಿಬಿರ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ಕೈಗೊಳ್ಳಲು ಈ ಕಛೇರಿಯಿಂದ ಈಗಾಗಲೇ ಎಲ್ಲಾ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಶಿಬಿರವು ಬೇಸಿಗೆ ಕಾಲದಲ್ಲಿ ಕೈಗೊಳ್ಳುತ್ತಿರುವುದರಿಂದ ಮೂಲಭೂತವಾಗಿ ಅಗತ್ಯವಾಗಿರುವ ತಂಪಾದ ಕುಡಿಯುವ ನೀರು, ತರಬೇತಿ ಕೋಣೆಯಲ್ಲಿ ವಿದ್ಯುತ್ ಬೆಳಕು, ಫ್ಯಾನ್ ಮತ್ತು ಮಕ್ಕಳ ಸುರಕ್ಷಿತೆಗೆ ಆದ್ಯತೆ ನೀಡಲು ಸಹ ಸೂಚಿಸಿದೆ. ಶಿಬಿರದ ಚಟುವಟಿಕೆಗಳಲ್ಲಿ ನಿಯತಕಾಲಿಕೆಗಳನ್ನು ಓದುವುದು, ಕಥೆ ಕಟ್ಟುವಿಕೆ, ಗಟ್ಟಿ ಓದು ಪತ್ರ ಬರೆಯುವುದು, ಕವನ ರಚಿಸುವುದು, ಭಾಷಣ ಮಾಡುವುದು, ಅಂಕಿ ಸಂಖ್ಯೆ ಮತ್ತು ವಿಜ್ಞಾನಕ್ಕೆ ಸಂಬಧಿಸಿದತೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಕಾಮನಬಿಲ್ಲು ಮೂಡಿಸುವಿಕೆ, ಅಲ್ಲದೇ ಎಲ್ಲಾ ಗ್ರಂಥಾಲಯ ಮೇಲ್ವಿಚಾರಕರಿಗೆ ಕಲಿಕೆ ಟಾಟಾ ಟ್ರಸ್ಟ್ ಸಂಸ್ಥೆ, ಮೂಲಕ ಈ ಶಿಬಿರ ಕೈಗೊಳ್ಳುವ ಕುರಿತು ತರಬೇತಿ ನೀಡಲಾಗಿರುತ್ತದೆ. ಈ ಶಿಬಿರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಭಾಗವಹಿಸುವಂತೆ ಈ ಮೂಲಕ ಸಾರ್ವಜನಿಕರಲ್ಲಿ ಹಾಗೂ ಪೋಷಕರಲ್ಲಿ ಅರಿವು ಮೂಡಿಸಲು ಸೂಚಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ: ವಿವಿಧ ಗ್ರಾಮಗಳಿಗೆ ಡಿಸಿ ಶಿಲ್ಪಾ ಶರ್ಮಾ ಭೇಟಿ



ಬೀದರ, ಮೇ.03–

ಬೇಸಿಗೆಯ ತೀವ್ರತೆಯಿಂದಾಗಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿರುವ ಕುರಿತು ಪತ್ರಿಕೆಯಲ್ಲಿ ವರದಿ ಬಂದ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹಾಗೂ ಹಿರಿಯ ಅಧಿಕಾರಿಗಳು ಔರಾದ ತಾಲೂಕಿನ ಸೊರಹಳ್ಳಿ, ಜಂಬಗಿ, ಮಹಾರಾಜವಾಡಿ, ವಿಜಯನಗರ್ ತಾಂಡಾ, ಏಕಲಾರ ತಾಂಡಾ, ಕಿರುಗುನವಾಡಿ, ಸೇರಿದಂತೆ ವಿವಿದೆಡೆ ಭೇಟಿ ನೀಡಿ ಪರಿಶೀಲಿಸಿದರು. ಜಿಲ್ಲಾಧಿಕಾರಿಗಳು ಗ್ರಾಮಸ್ಥರೊಂದಿಗೆ ಚರ್ಚಿಸಿ ನಂತರ ಬೇಸಿಗೆಯಲ್ಲಿ

ಯಾವುದೇ ಗ್ರಾಮ ಗಳಲ್ಲಿ ನೀರಿನ ಸಮಸ್ಯೆ ಉಂಟಾ ಗದಂತೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ಔರಾದ ತಹಸೀಲ್ದಾರ ಮಹೇಶ ಪಾಟೀಲ, ಗ್ರಾಮೀಣ ಕುಡಿಯುವ ನೀರು ಸಹಾಯಕ ಇಂಜಿನೀಯರ ಸೇರಿದಂತೆ ಇತರೇ ಅಧಿಕಾರಿಗಳು ಉಪಸ್ಥಿತರಿದ್ದರು.



10 ರಂದು ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ

ಕಲಬುರಗಿ,ಮೇ.03–

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮೇ 10 ರಂದು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲು ಶಿಷ್ಟಾಚಾರದ ತಹಶೀಲ್ದಾರ್ ಉಮಾಶಂಕರ್ ಹಿಳ್ಳೆ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಇತ್ತೀಚಿಗೆ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಮೇ 10 ರಂದು ರವಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಎಸ್ ಎಂ ಪಂಡಿತ ರಂಗಮಂದಿರದಲ್ಲಿ ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು ಹಾಗೂ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಚತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಡಾ . ಎಸ್. ಬಿ. ಕಾಮರೆಡ್ಡಿ, ನಿರೂಪಕರಾಗಿ ಜಿ.ಜಿ. ವಣಿಕ್ಯಾಳ ಮುಖ್ಯಗುರುಗುಳು ಸರಕಾರಿ ಪ್ರೌಢಶಾಲೆ ಅಂಬಲಗಾ ಹಾಗೂ ಉಪನ್ಯಾಸಕರನ್ನಾಗಿ ಶೇಖರ್ ಗಿರೆಡ್ಡಿ ಮುಖ್ಯಗುರುಗಳು ಸರಕಾರಿ ಪ್ರೌಢಶಾಲೆ ಇಲಕಲ್ ಅವರನ್ನು ಸಮಾಜದ ಮುಖಂಡರನ್ನೊಳಗೊಂಡ ಸಭೆಯಲ್ಲಿ ಆಯ್ಕೆ ಮಾಡ ಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆರಳಚು ಗಾರರಾದ ಗೌರಮ್ಮ ವಿ. ಅವರು ಅಧಿಕಾರಿಗಳನ್ನ ಸ್ವಾಗತಿಸಿ ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಲಕ್ಷ್ಮಿಕಾಂತ್ ರೆಡ್ಡಿ, ಮಹೇಶ್ ರೆಡ್ಡಿ, ಮಹೇಶ್ ಹೊಸೂರಕರ, ಅಮರನಾಥ ರೆಡ್ಡಿ, ಮಲ್ಲಿಕಾರ್ಜುನ್ ರೆಡ್ಡಿ, ಸಂತೋಷ್ ರೆಡ್ಡಿ ಹಾಗೂ ಸುನಿಲ್ ರೆಡ್ಡಿ ಮುಂತಾದ ಸಮಾಜ ಬಾಂಧವರು, ಸಾರ್ವಜನಿಕರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಐಪಿಎಲ್‌ನಲ್ಲೂ ಕಲಾತ್ಮಕ ಶೈಲಿ: ಅಪರೂಪದ ಆಟಗಾರ ಕೆ.ಎಲ್. ರಾಹುಲ್



ಕ್ರಿಕೆಟ್ ಇತಿಹಾಸದಲ್ಲಿ ಕೆಲವರು ಅಂಕಿಗಳ ಮೂಲಕ ನೆನಪಾಗುತ್ತಾರೆ; ಕೆಲವರು ವ್ಯಕ್ತಿತ್ವದ ಮೂಲಕ. ರಾಹುಲ್ ಎರಡರ ಮಧ್ಯೆ ನಿಂತಿರುವ ಅಪರೂಪದ ಕ್ರಿಕೆಟಿಗ. ಶತಕ ಹೊಡೆದರೂ ಅತಿರೇಕದ ಸಂಭ್ರಮವಿಲ್ಲ, ವಿಫಲವಾದರೂ ನೆಪಗಳಿಗೆ ಮೊರೆ ಹೋಗುವುದಿಲ್ಲ. ರಾಹುಲ್ ಅವರ ಈ ಮೌನವೇ, ಅವರ ಶಕ್ತಿ...

ಮೇ 1ರಂದು ಜೈಪುರದಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವರ್ಸಸ್ ರಾಜಸ್ಥಾನ್ ರಾಯಲ್ಸ್ ಪಂದ್ಯ, ಬಹಳ ಅಪರೂಪದ ಪಂದ್ಯವಾಗಿತ್ತು. ಸಮಬಲದ ಪೈಪೋಟಿಯಾಗಿತ್ತು. ನೋಡುಗರನ್ನು ಕೊನೆ ಕ್ಷಣದವರೆಗೂ ಕುರ್ಚಿಯ ತುದಿಗೆ ತಂದು ಕೂರಿಸಿತ್ತು. ನೆನಪಿನಲ್ಲಿ ಉಳಿಯುವ ಪಂದ್ಯಗಳಲ್ಲೊಂದಾಗಿತ್ತು. ಮೊದಲಿಗೆ ಬ್ಯಾಟ್ ಮಾಡಿದ ರಾಜಸ್ಥಾನ್ ರಾಯಲ್ಸ್ 6 ವಿಕೆಟ್‌ಗಳ ನಷ್ಟಕ್ಕೆ 225 ರನ್‌ಗಳನ್ನು ಪೇರಿಸಿತ್ತು. ಇದು ನಿಜಕ್ಕೂ ಸವಾಲಿನ ಮೊತ್ತವೇ ಆಗಿತ್ತು. ಆದರೆ 225 ರನ್‌ಗಳ ದೊಡ್ಡ ಗುರಿ ಬೆನ್ನಟ್ಟಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಆರಂಭಿಕ ಹಂತದಲ್ಲಿಯೇ ಉತ್ತಮ ಪೈಪೋಟಿ ನೀಡುವಲ್ಲಿ ಭರವಸೆ ಹುಟ್ಟಿಸಿತು.

ಆರಂಭಿಕ ಆಟಗಾರ ಪಥುಮ್ ಕೊಂಚ ಬಿರುಸಿನ ಹೊಡೆತಗಳಿಂದ ಬಹಳ ಬೇಗ ರನ್ ಪೇರಿಸುವತ್ತ ಗಮನ ಹರಿಸಿದರೆ, ಮತ್ತೊಂದು ಬದಿಯಲ್ಲಿದ್ದ ಕನ್ನಡಿಗ ಕೆ.ಎಲ್. ರಾಹುಲ್ ಕೊಂಚವೂ ವಿಚಲಿತರಾಗದೆ, ತಾಳ್ಮೆಗೆ ತಲೆಬಾಗಿದರು. ಐಪಿಎಲ್‌ನಲ್ಲಿ ಅಪರೂಪವೆನಿಸುವ ಕಲಾತ್ಮಕ ಶೈಲಿಯ ಆಟಕ್ಕೆ ಒತ್ತುಕೊಟ್ಟರು. ಅಷ್ಟೇ ಅಲ್ಲ, ಒಂದೊಂದು ಹೊಡೆತವನ್ನು ತೂಗಿನೋಡಿ ಪ್ರೇಕ್ಷಕರ ಕಣ್ಣಲ್ಲಿ ಉಳಿಯುವಂತೆ, ನಾಲಗೆಯ ಮೇಲೆ ನಲಿದಾಡುವಂತೆ ನೋಡಿಕೊಂಡರು. ಎದುರಿಸಿದ್ದು ಕೇವಲ 40 ಬಾಲ್‌ಗಳು, ಆದರೆ ಗಳಿಸಿದ್ದು 75 ರನ್‌ಗಳು. ಅದರಲ್ಲಿ ನಾಲ್ಕು ಬೌಂಡರಿಗಳಿದ್ದರೆ, ಐದು ಸಿಕ್ಸರ್. ತಂಡ ಗೆಲುವಿನತ್ತ ದಾಪುಗಾಲು ಹಾಕುವಂತೆ ಗಟ್ಟಿಮುಟ್ಟಾದ ಅಡಿಪಾಯ ಹಾಕಿಕೊಟ್ಟದ್ದರು. ಆ ಮೂಲಕ ತಂಡಕ್ಕೆ ಆತ್ಮಸ್ಥೈರ್ಯ ತುಂಬಿದ್ದರು.

ಕಳೆದ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಕೇವಲ 1 ರನ್‌ಗೆ ಔಟಾಗಿದ್ದ ರಾಹುಲ್, ಅಭಿಮಾನಿಗಳ ಅವಕೃಪೆಗೆ ಒಳಗಾಗಿದ್ದರು. ಆದರೆ ಈ ಪಂದ್ಯದಲ್ಲಿ ಪುಟಿದೆದ್ದು ನಿಂತಿದ್ದರು. ಸೊಗಸಾದ ಬ್ಯಾಟಿಂಗ್‌ನಿಂದ ಪ್ರೇಕ್ಷಕರ, ವೀಕ್ಷಕ ವಿವರಣೆಕಾರರ ಮೆಚ್ಚುಗೆ ಗಳಿಸಿದ್ದರು. ತಂಡಕ್ಕೆ ಪಂದ್ಯ ಗೆಲ್ಲಿಸಿಕೊಟ್ಟದ್ದಲ್ಲದೆ, ಪಂದ್ಯ ಪುರುಷೋತ್ತಮ ಪ್ರಶಸ್ತಿಗೂ ಭಾಜನರಾಗಿದ್ದರು.

ಇಷ್ಟಾದರೂ ಸಹನೆ, ಸಂಯಮಗಳ ಮೊತ್ತದಂತಿರುವ ಕೆ.ಎಲ್. ರಾಹುಲ್, ವೈಯಕ್ತಿಕ ದಾಖಲೆಗಳನ್ನು ಸಾಧಿಸುವುದು ಒಂದು ರೀತಿಯಲ್ಲಿ ಒಳ್ಳೆಯದು. ಅವು ನಮ್ಮ ಆತ್ಮವಿಶ್ವಾಸವನ್ನು ವೃದ್ಧಿಸುತ್ತವೆ. ಆದರೂ ಕ್ರಿಕೆಟ್ ತಂಡದ ಆಟ ಎನ್ನುವುದನ್ನು ಮರೆಯಲಿಲ್ಲ. ಆ ಮೂಲಕ ತಮ್ಮ ಆಟ ಮತ್ತು ಪ್ರತಿಭೆಯನ್ನು ಪ್ರದರ್ಶಿಸದೇ ಇರಲಿಲ್ಲ.

ಹಾಗೆ ನೋಡಿದರೆ, ಭಾರತೀಯ ಕ್ರಿಕೆಟ್‌ನಲ್ಲಿ ಪ್ರತಿಭೆಗಳ ಕೊರತೆ ಎಂದಿಗೂ ಇರಲಿಲ್ಲ. ಆದರೆ ಪ್ರತಿಭೆಯನ್ನು ತಾಳ್ಮೆಯಿಂದ ಹೊತ್ತುಕೊಂಡು, ಟೀಕೆಗಳ ನಡುವೆಯೂ ತನ್ನ ಶೈಲಿಯನ್ನು ಕಾಪಾಡಿಕೊಂಡು, ಮತ್ತೆ ಮತ್ತೆ ಸಾಬೀತುಪಡಿಸಿಕೊಂಡ ಆಟಗಾರರು ವಿರಳ. ಅಂತಹ ವಿರಳ ಆಟಗಾರರಲ್ಲಿ ಕೆ.ಎಲ್. ರಾಹುಲ್ ಕೂಡ ಒಬ್ಬರು. ಅವರ ಕ್ರಿಕೆಟ್ ಪಯಣವನ್ನು ಕೇವಲ ರನ್‌ಗಳ ಲೆಕ್ಕದಲ್ಲಿ ಅಳೆಯಲು ಸಾಧ್ಯವಿಲ್ಲ. ಅದು ಒತ್ತಡ, ನಿರೀಕ್ಷೆ, ವಿಫಲತೆ, ಮೌನ ಮತ್ತು ಪುನರಾಗಮನಗಳ ಪುರಾಣದಂತೆ ಕಂಡರೂ ಆಶ್ಚರ್ಯವಿಲ್ಲ.

ಕರ್ನಾಟಕದ ನೆಲದಿಂದ ಬಂದ ರಾಹುಲ್, ಆರಂಭದಿಂದಲೇ ಕ್ಲಾಸ್ ಬ್ಯಾಟ್ಸ್‌ಮನ್ ಎಂದು ಗುರುತಿಸಲ್ಪಟ್ಟವರು. ಅವರ ಕವರ್ ಡ್ರೈವ್ ಅತ್ಯುತ್ತಮ ಹೊಡೆತಗಳಲ್ಲೊಂದು. ಆದರೆ ಭಾರತೀಯ ಕ್ರಿಕೆಟ್‌ನ ಸಮಸ್ಯೆಯೇ ಬೇರೆ. ಇಲ್ಲಿ ಆಟಕ್ಕಿಂತ, ಆಟದ ಸೊಗಸಿಗಿಂತ, ಸೌಂದರ್ಯಕ್ಕಿಂತ ಸದ್ದು ಮಾಡುವುದು ಮುಖ್ಯ. ಷೋ ಕೊಡುವುದು ಮುಖ್ಯ. ಆದರೆ, ರಾಹುಲ್ ಸದ್ದು ಮಾಡುವ ಆಟಗಾರನೂ ಅಲ್ಲ, ಅನಗತ್ಯವಾಗಿ ಷೋ ಮಾಡುವುದಕ್ಕೂ ಹೋಗುವುದಿಲ್ಲ. ಅವರು ಮಿತಭಾಷಿ, ಸ್ಥಿತಪ್ರಜ್ಞ. ಮೈದಾನದಲ್ಲೂ ಆ ಮೂಲಕವೇ ಉತ್ತರ ಕೊಡುವವರು. ಅದಕ್ಕಾಗಿಯೇ ಅವರು ಹಲವಾರು ಬಾರಿ ತಪ್ಪಾಗಿ ಅರ್ಥೈಸಲ್ಪಟ್ಟವರು.

ಒಂದು ಕಾಲದಲ್ಲಿ ಭಾರತ ಕ್ರಿಕೆಟ್ ಟೆಸ್ಟ್ ತಂಡದ ಭವಿಷ್ಯವೆಂದೂ, ಮತ್ತೊಂದು ಹಂತದಲ್ಲಿ ಟಿ20 ಕ್ರಿಕೆಟ್‌ಗೆ ಸೂಕ್ತವಲ್ಲವೆಂದೂ, ಮತ್ತೊಮ್ಮೆ ಏಕದಿನ ಕ್ರಿಕೆಟ್‌ನ ಆಧಾರಸ್ತಂಭವೆಂದೂ ಅವರನ್ನು ಕರೆಯಲಾಯಿತು. ಭಾರತೀಯ ಕ್ರಿಕೆಟ್ ವ್ಯವಸ್ಥೆ ರಾಹುಲ್‌ರನ್ನು ಯಾವ ಪಾತ್ರಕ್ಕೆ ಬಳಸಬೇಕು ಎಂಬುದರ ಬಗ್ಗೆ ಹಲವಾರು ಬಾರಿ ಗೊಂದಲಕ್ಕೀಡಾಯಿತು. ಓಪನರ್, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್, ವಿಕೆಟ್ ಕೀಪರ್, ಫಿನಿಷರ್- ಎಲ್ಲ ಪಾತ್ರಗಳನ್ನೂ ಅವರು ಹೊತ್ತರು. ಪ್ರಶ್ನೆ ಏನೆಂದರೆ: ಇಷ್ಟೊಂದು ಹೊರೆ ಹೊತ್ತ ಆಟಗಾರನಿಗೆ ವ್ಯವಸ್ಥೆ ಸೂಕ್ತ ನ್ಯಾಯ ನೀಡಿತೇ? ಆಟಗಾರನಿಗೆ ಬೇಕಾದ ಭರವಸೆ ಒದಗಿಸಿತೇ?

ಇಷ್ಟಾದರೂ ರಾಹುಲ್ ತಮ್ಮ ಕಲಾತ್ಮಕ ಆಟವನ್ನು, ಆಟದೊಂದಿಗಿನ ತಲ್ಲೀನತೆಯನ್ನು ಬಿಟ್ಟುಕೊಟ್ಟವರಲ್ಲ. ಮೊದಲು ಹೇಗೆ ಆಡುತ್ತಿದ್ದರೋ, ಈಗಲೂ ಹಾಗೆಯೇ ಆಡುತ್ತಿದ್ದಾರೆ. ಎಲ್ಲ ಆಟಗಾರರಲ್ಲಿ ಕಾಣಬಹುದಾದ ಏರಿಳಿತಗಳು ರಾಹುಲ್‌ರಲ್ಲೂ ಕಂಡಿವೆ. ಅದು ಸಹಜ ಕೂಡ. ಆದರೆ ಕ್ರಿಕೆಟ್ ಸಂಸ್ಥೆಗಳು, ಆಯ್ಕೆದಾರರು ಮತ್ತು ಫ್ರಾಂಚೈಸಿಗಳು ಯೋಚಿಸುವ ಬಗೆಯೇ ಬೇರೆ. ಇದನ್ನು ನೋಡಿಯೇ ನವಜೋತ್ ಸಿದ್ದು, ರಾಹುಲ್ ಒಬ್ಬ ನಿಸ್ವಾರ್ಥ ಕ್ರಿಕೆಟರ್, ಓಪನಿಂಗ್ ಮಾಡಲು ಹೇಳಿ, ಮಧ್ಯಮ ಕ್ರಮಾಂಕದಲ್ಲಿ ಆಡಲು ಹೇಳಿ, 6ನೇ ಸ್ಥಾನದಲ್ಲಿ ಆಡಲು ಹೇಳಿ, ವಿಕೆಟ್ ಕೀಪಿಂಗ್ ಮಾಡಲು ಹೇಳಿ, ಬೇಡ ಫಿಲ್ಡಿಂಗ್ ಮಾಡು ಅನ್ನಿ, ಎಲ್ಲದಕ್ಕೂ ಆತ ರೆಡಿ ಇರುತ್ತಾರೆ. ಆಟಗಾರರು ತಂಡಕ್ಕೆ ಏನು ಬೇಕೊ ಅದನ್ನು ಕೊಡಲು ತಯಾರಿರಬೇಕು, ಅಂಥವರಿಗೆಲ್ಲ ಕೆ.ಎಲ್ ರಾಹುಲ್ ಮಾದರಿ ಎಂದು ಹಾಡಿಹೊಗಳಿದ್ದೂ ಇದೆ.

ಐಪಿಎಲ್ ಯುಗದಲ್ಲಿ ವೇಗವೇ ಮಹತ್ವದ ಮೌಲ್ಯವಾಗಿಬಿಟ್ಟಿದೆ. ಸ್ಟ್ರೈಕ್ ರೇಟ್ ಎಂಬ ಅಂಕಿಯ ಆಧಾರದ ಮೇಲೆ ಆಟಗಾರರ ಮೌಲ್ಯ ನಿರ್ಧಾರವಾಗುತ್ತದೆ. ಇದೇ ಸಂದರ್ಭದಲ್ಲಿ ರಾಹುಲ್ ಮೇಲಿನ ಟೀಕೆಗಳು ಹೆಚ್ಚಾದವು. ಅವರು ನಿಧಾನವಾಗಿ ಆಡುತ್ತಾರೆ, ತಂಡದ ಮೊರೆ ಹೋಗುತ್ತಾರೆ, ರಿಸ್ಕ್ ತೆಗೆದುಕೊಳ್ಳುವುದಿಲ್ಲ ಎಂಬ ಆರೋಪಗಳು ಕೇಳಿಬಂದವು. ಆದರೆ ಕ್ರಿಕೆಟ್ ಎನ್ನುವುದು ಕೇವಲ ಹೊಡೆತಗಳ ಕ್ರೀಡೆಯಲ್ಲ; ಪರಿಸ್ಥಿತಿಯನ್ನು ಅರಿತು ಅರಗಿಸಿಕೊಂಡು ಇನ್ನಿಂಗ್ಸ್ ಕಟ್ಟುವ ಕಲೆ. ಟಿ20 ಕ್ರಿಕೆಟ್‌ನ ಅತಿಯಾದ ವ್ಯಾಪಾರೀಕರಣದಲ್ಲಿ, ಸಹನೆ ಮತ್ತು ತಾಂತ್ರಿಕ ಶಿಸ್ತಿನ ಮೌಲ್ಯ ಕುಗ್ಗುತ್ತಿದೆ.

ಆದರೆ, ಈ ಬಾರಿಯ ಐಪಿಎಲ್‌ನಲ್ಲಿ ಕೆ.ಎಲ್. ರಾಹುಲ್ ತಮ್ಮ ಮೇಲಿನ ಟೀಕೆಗಳಿಗೆ ಬ್ಯಾಟ್ ಮೂಲಕವೇ ಉತ್ತರ ನೀಡುತ್ತಿದ್ದಾರೆ. ಈ ಸೀಸನ್‌ನಲ್ಲಿ, ಇಲ್ಲಿಯವರೆಗೆ ರಾಹುಲ್ ಪೇರಿಸಿದ ಒಟ್ಟು ರನ್ 433. ಸ್ಟ್ರೈಕ್ ರೇಟ್ 186. ಜೊತೆಗೆ ಆರೇಂಜ್ ಕ್ಯಾಪ್ ಗೌರವ ಬೇರೆ. ಅಂದರೆ, ತಮ್ಮ ಸ್ಟ್ರೈಕ್ ರೇಟ್ ಬಗ್ಗೆ ಟೀಕೆ ಮಾಡಿದವರು, ಫಾರ್ಮ್ ಬಗ್ಗೆ ಆಡಿಕೊಂಡು ನಗಾಡಿದವರನ್ನು ಇಂದು ತಲೆ ತಗ್ಗಿಸುವಂತೆ ಮಾಡಿದ್ದಾರೆ.


ಇನ್ನು ಆಟಗಾರರಿಗೆ ಫಿಟ್ನೆಸ್ ಬಹಳ ಮುಖ್ಯ. ರಾಹುಲ್ ವಿಷಯದಲ್ಲಿ, ಅವರ ಕ್ರಿಕೆಟ್ ಪಯಣದಲ್ಲಿ ಈ ಫಿಟ್ನೆಸ್ ಕೂಡ ಅವರನ್ನು ಕಾಡಿದ್ದುಂಟು. ಆದರೆ ಪ್ರತೀ ಬಾರಿ ಅವರು ಮರಳಿ ಬಂದ ರೀತಿ ಗಮನಾರ್ಹವಾದುದು. ಹಲವರು ಸದ್ದು-ಗದ್ದಲ ಮಾಡುವ ಮೂಲಕ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಿದರೆ; ರಾಹುಲ್ ಮಾತ್ರ ಬ್ಯಾಟ್ ಎಂಬ ಮಾಂತ್ರಿಕ ದಂಡದ ಮೂಲಕವೇ ಉತ್ತರ ಕೊಡುತ್ತಾರೆ. ಶತಕ ಹೊಡೆದರೂ ಅತಿರೇಕದ ಸಂಭ್ರಮವಿಲ್ಲ, ವಿಫಲವಾದರೂ ನೆಪಗಳಿಗೆ ಮೊರೆ ಹೋಗುವುದಿಲ್ಲ. ರಾಹುಲ್ ಅವರ ಈ ಮೌನವೇ, ಅವರ ಶಕ್ತಿಯಾಗಿದೆ, ಅವರ ವಿರೋಧಿಗಳಿಗೆ ಅಸ್ತ್ರದಂತೆ ಬಳಕೆಯಾಗುತ್ತಿದೆ.

ಭಾರತೀಯ ಕ್ರಿಕೆಟ್ ಅಭಿಮಾನಿಗಳು ಆಟಗಾರರನ್ನು ಬಹಳ ಬೇಗ ದೇವರನ್ನಾಗಿಸಿ ಆರಾಧಿಸುತ್ತಾರೆ. ಅದೇ ವೇಗದಲ್ಲಿ ಅನುಮಾನಿಸಿ ಕೆಳಕ್ಕೆ ಬಿಸಾಡುತ್ತಾರೆ. ಕೆ.ಎಲ್. ರಾಹುಲ್ ಈ ಎರಡನ್ನೂ ಅನುಭವಿಸಿದ ಆಟಗಾರ. ಆದರೆ ಅವರ ಆಟ ಇನ್ನೂ ಮುಗಿದಿಲ್ಲ. ಏಕೆಂದರೆ ಶೈಲಿ, ತಾಳ್ಮೆ ಮತ್ತು ಆತ್ಮವಿಶ್ವಾಸಗಳ ಮೇಲೆ ನಿಂತ ಆಟಗಾರರು ಅಷ್ಟು ಬೇಗ ಮುಗಿಯುವುದಿಲ್ಲ.

ಕ್ರಿಕೆಟ್‌ನಲ್ಲಿ ಬೇಸಿಕ್ಸ್ ತುಂಬಾ ಮುಖ್ಯ. ರಾಹುಲ್ ಅವರ ಆಟ ಕಲಾತ್ಮಕವಾಗಿ ಕಾಣಲು ಕಾರಣ ಅವನ ಬಲಿಷ್ಠ ಬೇಸಿಕ್ಸ್. ಹೊಡಿ-ಬಡಿ ಕದನದಂತೆ ಕಾಣುವ ಟಿ20 ಕ್ರಿಕೆಟನ್ನು ಕೂಡ ಕಲಾತ್ಮಕವಾಗಿ ಆಡಬಹುದು ಎಂಬುದನ್ನು ತೋರಿಸಿಕೊಟ್ಟವರು ರಾಹುಲ್. ಇವರ ಈ ಬ್ಯಾಟಿಂಗ್ ಶೈಲಿ, ಕಲಿಕೆಯ ಹಂತದಲ್ಲಿರುವ ಹುಡುಗರಿಗೆ ಪಾಠವಾದರೂ ಆಶ್ಚರ್ಯವಿಲ್ಲ.

ಕ್ರಿಕೆಟ್ ಇತಿಹಾಸದಲ್ಲಿ ಕೆಲವರು ಅಂಕಿಗಳ ಮೂಲಕ ನೆನಪಾಗುತ್ತಾರೆ; ಕೆಲವರು ವ್ಯಕ್ತಿತ್ವದ ಮೂಲಕ. ರಾಹುಲ್ ಎರಡರ ಮಧ್ಯೆ ನಿಂತಿರುವ ಅಪರೂಪದ ಕ್ರಿಕೆಟಿಗ- ಮೃದು ಮನಸ್ಸಿನ ಹಿಂದೆ ಗಟ್ಟಿಯಾದ ಬ್ಯಾಟಿಂಗ್ ಹೊಂದಿರುವ ಆಟಗಾರ. ಹಾಗೆಯೇ ಗತಕಾಲದ ಕ್ರಿಕೆಟ್ ಸಂಸ್ಕೃತಿಯ ಕೊನೆಯ ಕೊಂಡಿಯಂತೆ ಕಾಣುವ ಅಪರೂಪದ ಆಟಗಾರ.

ಮತದಾನದ ಮೇಜಿನಿಂದ ಮತ ಎಣಿಕೆಯ ಮೇಜಿಗೆ; ಇವಿಎಂಗಳ ಪಯಣ ಹೀಗಿದೆ



ಇವಿಎಂ ಚುನಾವಣಾ ಪ್ರಕ್ರಿಯೆಯನ್ನು ವೇಗಗೊಳಿಸಿದೆ. ಆದರೆ 'ಪಾರದರ್ಶಕತೆ'ಯ ವಿಷಯದಲ್ಲಿ ಇಂದಿಗೂ ಹಲವು ಗಂಭೀರ ಪ್ರಶ್ನೆಗಳು ಮತ್ತು ಆತಂಕಗಳು ಉಳಿದುಕೊಂಡಿವೆ. ಜರ್ಮನಿ ಮತ್ತು ನೆದರ್‌ಲ್ಯಾಂಡ್ ಮೊದಲಾದ ದೇಶಗಳಲ್ಲಿ ಪಾರದರ್ಶಕತೆ ಕೊರತೆ ಇದೆ ಎಂಬ ಕಾರಣಕ್ಕೆ ಇವಿಎಂಗಳನ್ನು ನಿಷೇಧಿಸಿ ಮತ್ತೆ ಪೇಪರ್ ಬ್ಯಾಲೆಟ್ ಬಳಸಲಾಗುತ್ತಿದೆ.

ದೇಶದಲ್ಲಿ ಬ್ಯಾಲೆಟ್ ಪೇಪರ್‌ನಿಂದ ಆರಂಭವಾದ ಮತದಾನ ಪ್ರಕ್ರಿಯೆಯು ಇಂದು ಇವಿಎಂ ಅಥವಾ ವಿದ್ಯುನ್ಮಾನ ಮತಯಂತ್ರಗಳತ್ತ ತಲುಪಿದೆ. 2004ರಿಂದ ದೇಶದಲ್ಲಿ ಸಂಪೂರ್ಣವಾಗಿ ಇವಿಎಂ ಬಳಸಲು ಪ್ರಾರಂಭಿಸಲಾಗಿದೆ. ಅಲ್ಲಿಯವರೆಗೆ ಬ್ಯಾಲೆಟ್ ಪೇಪರ್ ಅಥವಾ ಮತಪತ್ರಗಳ ಮೂಲಕವೇ ಚುನಾವಣೆಗಳು ನಡೆಯುತ್ತಿದ್ದವು. ಮತದಾನ ಪ್ರಕ್ರಿಯೆ ಪಾರದರ್ಶಕಗೊಳಿಸಲು ಮತ್ತು ಲಕ್ಷಾಂತರ ಟನ್ ಕಾಗದವನ್ನು ಉಳಿಸುವ ನಿಟ್ಟಿನಲ್ಲಿ ಇವಿಎಂಗಳ ಬಳಕೆಯತ್ತ ಮುಖ ಮಾಡಲಾಯಿತು.

1951-1957ರವರೆಗೆ ಮೊದಲ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಮತದಾರರು ಪ್ರತಿ ಅಭ್ಯರ್ಥಿಗೆ ಮೀಸಲಿಟ್ಟ ಪ್ರತ್ಯೇಕ ಪೆಟ್ಟಿಗೆಗಳಿಗೆ ಖಾಲಿ ಬ್ಯಾಲೆಟ್ ಪೇಪರ್‌ಗಳನ್ನು ಹಾಕುವ ಪದ್ಧತಿ ಇತ್ತು. ಆದರೆ 1960ರ ದಶಕದಲ್ಲಿ ನಡೆದ ಮೂರನೇ ಸಾರ್ವತ್ರಿಕ ಚುನಾವಣೆಯಿಂದ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆ ಇರುವ ಸಾಂಪ್ರದಾಯಿಕ ಮತಪತ್ರಗಳನ್ನು ಪರಿಚಯಿಸಲಾಯಿತು. ಮತದಾರರು ತಮ್ಮ ಆಯ್ಕೆಯ ಅಭ್ಯರ್ಥಿಯ ಮುಂದೆ ಮುದ್ರೆ ಒತ್ತುವ ಮೂಲಕ ಮತದಾನ ಮಾಡುತ್ತಿದ್ದರು.

1982ರಲ್ಲಿ ಕೇರಳದ ಪಾರವೂರು ವಿಧಾನಸಭಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಬಳಸಲಾಯಿತು. 2001ರ ವೇಳೆಗೆ ತಮಿಳುನಾಡು, ಕೇರಳ, ಪುದುಚೇರಿ ಮತ್ತು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಇವಿಎಂ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಬಂದವು. 2004ರ ಲೋಕಸಭಾ ಚುನಾವಣೆಯಿಂದ ದೇಶಾದ್ಯಂತ ಎಲ್ಲ ಮತಗಟ್ಟೆಗಳಲ್ಲೂ ಬ್ಯಾಲೆಟ್ ಪೇಪರ್ ಬದಲಿಗೆ ಬಳಸಲಾಗುತ್ತಿದೆ.

ಮತದಾನಕ್ಕೆ ಮುನ್ನ ಇವಿಎಂ

ಚುನಾವಣೆಗೆ ಕೆಲವು ತಿಂಗಳುಗಳ ಮೊದಲೇ ಅಥವಾ ಇಂಜಿನಿಯರ್‌ಗಳು ಇವಿಎಂಗಳ ತಾಂತ್ರಿಕ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತಾರೆ. ಈ ಪ್ರಕ್ರಿಯೆಯು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಯುತ್ತದೆ. ಅದಾದ ಬಳಿಕ ಯಾವ ಇವಿಎಂ ಯಾವ ಕ್ಷೇತ್ರಕ್ಕೆ ಹೋಗಬೇಕು ಮತ್ತು ಯಾವ ಮತಗಟ್ಟೆಗೆ ಹೋಗಬೇಕು ಎಂಬುದನ್ನು ಸಾಫ್ಟ್‌ವೇರ್ ಮೂಲಕ ಯಾದೃಚ್ಛಿಕವಾಗಿ ನಿರ್ಧರಿಸಲಾಗುತ್ತದೆ. ಈ ಹಂತದಲ್ಲಿ ಇವಿಎಂಗಳನ್ನು ಬಿಗಿ ಭದ್ರತೆಯಿರುವ ಸ್ಟ್ರಾಂಗ್ ರೂಮ್‌ಗಳಲ್ಲಿ ಇರಿಸಲಾಗುತ್ತದೆ. ಈ ಕೊಠಡಿಗಳಿಗೆ ಬೀಗ ಹಾಕಿ ಸೀಲ್ ಮಾಡಲಾಗಿರುತ್ತದೆ.

ಮತದಾನದ ದಿನ ಇವಿಎಂ

ಮತದಾನ ಆರಂಭವಾಗುವ ಮುನ್ನ ಅಂದರೆ ಬೆಳಿಗ್ಗೆ 5:30 ಅಥವಾ 6 ಗಂಟೆಗೆ ಅಭ್ಯರ್ಥಿಗಳ ಏಜೆಂಟ್‌ಗಳ ಸಮ್ಮುಖದಲ್ಲಿ ಕನಿಷ್ಠ 50 ಮತಗಳನ್ನು ಹಾಕಿ ಇವಿಎಂ ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂದು ಪರೀಕ್ಷಿಸಲಾಗುತ್ತದೆ. ಇದನ್ನು ಮಾಕ್ ಪೋಲ್ ( ) ಎಂದು ಕರೆಯಲಾಗುತ್ತದೆ. ನಂತರ ಆ ಮತಗಳನ್ನು ಅಳಿಸಿ, ಯಂತ್ರವನ್ನು ಸೀಲ್ ಮಾಡಲಾಗುತ್ತದೆ. ಯಂತ್ರವನ್ನು ಸೀಲ್ ಮಾಡುವಾಗ ಅದರ ಮೇಲೆ ಅಭ್ಯರ್ಥಿಗಳ ಏಜೆಂಟರು ಸಹಿ ಮಾಡುತ್ತಾರೆ. ಆ ಸೀಲ್ ಸಂಖ್ಯೆಯನ್ನು ದಾಖಲಿಸಿಕೊಳ್ಳಲಾಗುತ್ತದೆ.

ಮತದಾನದ ನಂತರ ಇವಿಎಂ

ಮತದಾನ ಮುಗಿದ ತಕ್ಷಣ ಮತಗಟ್ಟೆ ಅಧಿಕಾರಿ ಬಟನ್ ಒತ್ತುತ್ತಾರೆ. ಇದರ ನಂತರ ಯಂತ್ರವು ಯಾವುದೇ ಮತವನ್ನು ಸ್ವೀಕರಿಸಲ್ಲ. ಆ ದಿನ ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆಯನ್ನು ಅಧಿಕಾರಿಗಳು 17ಯಲ್ಲಿ ನಮೂದಿಸಿ, ಏಜೆಂಟರಿಗೆ ಅದರ ಪ್ರತಿಯನ್ನು ನೀಡುತ್ತಾರೆ. ಇದು ಎಣಿಕೆಯ ದಿನ ಮತಗಳ ಸಂಖ್ಯೆಯನ್ನು ತಾಳೆ ನೋಡಲು ಸಹಕಾರಿಯಾಗುತ್ತದೆ. ಅದಾದ ಬಳಿಕ ಮತಯಂತ್ರಗಳನ್ನು ಅವುಗಳ ಮೂಲ ಬಾಕ್ಸ್ ಗಳಲ್ಲಿ ಇಟ್ಟು ಸೀಲ್ ಮಾಡಿ, ಸಶಸ್ತ್ರ ಪೊಲೀಸ್ ಭದ್ರತೆಯಲ್ಲಿ ಜಿಲ್ಲಾ ಕೇಂದ್ರದ ಸ್ಟ್ರಾಂಗ್ ರೂಮ್‌ಗಳಿಗೆ ತರಲಾಗುತ್ತದೆ.

ಸ್ಟ್ರಾಂಗ್ ರೂಮ್ ಭದ್ರತೆಯಲ್ಲಿ ಇವಿಎಂ

ಕೇಂದ್ರ ಮೀಸಲು ಪೊಲೀಸ್ ಪಡೆ, ರಾಜ್ಯ ಸಶಸ್ತ್ರ ಪಡೆ ಮತ್ತು ಸ್ಥಳೀಯ ಪೊಲೀಸ್ ಹೀಗೆ ಸ್ಟ್ರಾಂಗ್ ರೂಮ್‌ಗಳಿಗೆ ಮೂರು ಹಂತದ ಭದ್ರತೆ ಇರುತ್ತದೆ. ಇಡೀ ಆವರಣವು ದಿನದ 24 ಗಂಟೆಯೂ ಸಿಸಿಟಿವಿ ಕಣ್ಗಾವಲಿನಲ್ಲಿರುತ್ತದೆ. ಸ್ಟ್ರಾಂಗ್ ರೂಮ್ ಹೊರಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಕೂಡ ಮೊಕ್ಕಾಂ ಹೂಡಿ ಕಾವಲು ಕಾಯಲು ಅವಕಾಶವಿರುತ್ತದೆ.

ಮತ ಎಣಿಕೆ ಮತ್ತು ಅದರ ನಂತರ

ಎಣಿಕೆಯ ದಿನ ಇವಿಎಂಗಳನ್ನು ಹೊರತೆಗೆಯುವಾಗ, ಅವುಗಳ ಸೀಲ್ ಸರಿಯಾಗಿದೆಯೇ ಎಂಬುದನ್ನು ಎಲ್ಲ ಪಕ್ಷದ ಏಜೆಂಟರಿಗೆ ತೋರಿಸಲಾಗುತ್ತದೆ. ಅಭ್ಯರ್ಥಿಗಳ ಕೌಂಟಿಂಗ್ ಏಜೆಂಟ್‌ಗಳು ಈ ಹಂತದಲ್ಲಿಯೇ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಮೊಹರುಗಳನ್ನು ಒಡೆಯಲಾಗಿದೆಯೇ ಎಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸಬೇಕಾಗುತ್ತದೆ. ಪ್ರತಿ ವಿಧಾನಸಭಾ ಕ್ಷೇತ್ರದ ಐದು ಯಾದೃಚ್ಛಿಕ ಮತಗಟ್ಟೆಗಳ ವಿವಿಪ್ಯಾಟ್ ಸ್ಲಿಪ್‌ಗಳನ್ನು ಎಣಿಸಿ ಇವಿಎಂ ಫಲಿತಾಂಶದೊಂದಿಗೆ ತಾಳೆ ನೋಡಲಾಗುತ್ತದೆ. ಈ ವೇಳೆಯೂ ತಾಳೆಯಾಗುತ್ತದೆಯೇ ಎಂದು ಏಜೆಂಟ್ ಗಮನಿಸಬೇಕಾಗುತ್ತದೆ. ಒಂದು ವೇಳೆ ಕಂಟ್ರೋಲ್ ಯೂನಿಟ್ ಫಲಿತಾಂಶವನ್ನು ತೋರಿಸದಿದ್ದರೆ ಬ್ಯಾಟರಿ ಪರಿಶೀಲಿಸಲಾಗುತ್ತದೆ. ಆಗಲೂ ಕೆಲಸ ಮಾಡದಿದ್ದರೆ ಯೂನಿಟ್ ಅನ್ನು ಬಂದ್ ಮಾಡಿ ಚುನಾವಣಾಧಿಕಾರಿಯ ವಶಕ್ಕೆ ನೀಡಲಾಗುತ್ತದೆ. ಹೀಗೆ ತೊಂದರೆ ಎದುರಿಸುವ ಕಂಟ್ರೋಲ್ ಯೂನಿಟ್‌ಗಳು ಚುನಾವಣಾಧಿಕಾರಿಯ ವಶದಲ್ಲಿರುತ್ತವೆ. ಗೆಲುವಿನ ಅಂತರವು ತೊಂದರೆಗೊಳಗಾಗಿ ತೆರೆಯದೆ ಇರುವ ಕಂಟ್ರೋಲ್ ಯೂನಿಟ್‌ಗಳಲ್ಲಿರುವ ಮತಗಳಿಗಿಂತ ಹೆಚ್ಚಿದ್ದರೆ, ಈ ಯಂತ್ರಗಳಲ್ಲಿನ ಮತಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಅಂತಿಮ ಫಲಿತಾಂಶವನ್ನು ಘೋಷಿಸಲಾಗುತ್ತದೆ. ಅಂತರ ಕಡಿಮೆ ಇದ್ದರೆ ತೊಂದರೆಗೀಡಾದ ಕಂಟ್ರೋಲ್ ಯೂನಿಟ್‌ಗಳಿಗೆ ಸಂಬಂಧಿಸಿದ ವಿವಿಪ್ಯಾಟ್‌ಗಳಲ್ಲಿನ ಮತಗಳನ್ನು ಎಣಿಕೆ ಮಾಡಲಾಗುತ್ತದೆ.

ಫಲಿತಾಂಶ ಘೋಷಣೆಯಾದ ನಂತರ, ಇವಿಎಂಗಳನ್ನು ಮತ್ತೆ ಸೀಲ್ ಮಾಡಿ ಕನಿಷ್ಠ 45 ದಿನಗಳವರೆಗೆ ಸುರಕ್ಷಿತವಾಗಿ ಇಡಲಾಗುತ್ತದೆ. ಯಾರಾದರೂ ಚುನಾವಣಾ ಫಲಿತಾಂಶವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರೆ ತನಿಖೆಗೆ ಇವು ಅಗತ್ಯವಿರುತ್ತವೆ. ಅರ್ಜಿ ಸಲ್ಲಿಕೆಯಾಗದಿದ್ದರೆ, ಚುನಾವಣಾ ಆಯೋಗದ ಅನುಮತಿಯೊಂದಿಗೆ ಮುಂದಿನ ಚುನಾವಣೆಗೆ ಬಳಸಲು ತಯಾರಿ ನಡೆಸಲಾಗುತ್ತದೆ. ಈ ಎಲ್ಲ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ ಮಾಡಲಾಗುತ್ತದೆ.

ಪಾರದರ್ಶಕತೆ ಎಂಬುದು ಇಂದಿಗೂ ಮರೀಚಿಕೆ

ಹೀಗೆ ಇವಿಎಂ ಪಯಣ ಸಾಗುತ್ತದೆ. ಆದರೆ ಮತದಾನ ಪ್ರಕ್ರಿಯೆ ಪಾರದರ್ಶಕಗೊಳಿಸಲೆಂದು ಇವಿಎಂಗಳ ಬಳಕೆ ಶುರು ಮಾಡಿದ್ದರೂ ಪಾರದರ್ಶಕತೆ ಎಂಬುದು ಇಂದಿಗೂ ಮರೀಚಿಕೆ. ಇವಿಎಂ ಚುನಾವಣಾ ಪ್ರಕ್ರಿಯೆಯನ್ನು ವೇಗಗೊಳಿಸಿದೆ. ಆದರೆ ಪಾರದರ್ಶಕತೆಯ ವಿಷಯದಲ್ಲಿ ಇಂದಿಗೂ ಹಲವು ಗಂಭೀರ ಪ್ರಶ್ನೆಗಳು ಮತ್ತು ಆತಂಕಗಳು ಉಳಿದುಕೊಂಡಿವೆ.

ಹೇಗೆ ಕೆಲಸ ಮಾಡುತ್ತವೆ ಎಂಬ ಸೋರ್ಸ್ ಕೋಡ್ ಅನ್ನು ಚುನಾವಣಾ ಆಯೋಗವು ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ. ಇದರಿಂದಾಗಿ ಒಬ್ಬ ಮತದಾರ ಬಟನ್ ಒತ್ತಿದಾಗ ಸಾಫ್ಟ್‌ವೇರ್ ನಿಜವಾಗಿಯೂ ಯಾವ ಅಭ್ಯರ್ಥಿಗೆ ಮತ ದಾಖಲಿಸುತ್ತಿದೆ ಎಂಬುದನ್ನು ಪರಿಶೀಲಿಸಲು ಮತದಾರನಿಗಾಗಲಿ ಅಥವಾ ತಾಂತ್ರಿಕ ತಜ್ಞರಿಗಾಗಲಿ ಅವಕಾಶವಿಲ್ಲ. ಇದನ್ನು ಕೇವಲ ತಯಾರಕ ಕಂಪನಿಗಳು (ಮತ್ತು) ಮಾತ್ರ ತಿಳಿದಿರುತ್ತವೆ.

ಈ ಪಾರದರ್ಶಕತೆ ಕೊರತೆ ಆರೋಪಗಳ ನಡುವೆ ( ) ವ್ಯವಸ್ಥೆಯು ಕೇವಲ ಒಮ್ಮೆಗೆ ಖಾತರಿ ನೀಡುತ್ತದೆಯಾದರೂ, ಇದು ಪೂರ್ಣ ಪ್ರಮಾಣದ ಲೆಕ್ಕಪರಿಶೋಧನೆಯಲ್ಲ. ಪ್ರಸ್ತುತ ನಿಯಮದಂತೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕೇವಲ 5 ಯಾದೃಚ್ಛಿಕ ಮತಗಟ್ಟೆಗಳ ಚೀಟಿಗಳನ್ನು ಮಾತ್ರ ಎಣಿಕೆ ಮಾಡಲಾಗುತ್ತದೆ. ಅಂದರೆ ಉಳಿದ 95%ಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ಇವಿಎಂ ತೋರಿಸುವ ಅಂಕಿಅಂಶಗಳನ್ನೇ ಅಂತಿಮ ಎಂದು ನಂಬಲಾಗುತ್ತದೆ. ಒಂದು ವೇಳೆ ಮತ್ತು ನಡುವೆ ವ್ಯತ್ಯಾಸ ಕಂಡುಬಂದರೂ, ಅದನ್ನು ಸರಿಪಡಿಸುವ ಸ್ಪಷ್ಟ ಮಾರ್ಗಸೂಚಿಗಳ ಬಗ್ಗೆ ಗೊಂದಲವಿದೆ.

ವಿವಿಪ್ಯಾಟ್‌ನಂತಹ ಸಾಧನವು ಹೆಚ್ಚುವರಿ ಪ್ರೋಗ್ರ್ಯಾಮ್ ಮೆಮರಿ ಹೊಂದಿರುತ್ತದೆ. ನುಸುಳಿಸಲಾಗುವ ಮ್ಯಾಲ್ವೇರ್ ಈ ಹೆಚ್ಚುವರಿ ಮೆಮೊರಿಯಲ್ಲಿ ಕುಳಿತು ಯಂತ್ರವನ್ನು ದುರ್ವರ್ತಿಸಿ ಬರ್ನ್ಟ್ ಮೆಮರಿ ಅಥವಾ ಮೈಕ್ರೋಕಂಟ್ರೋಲರ್‌ಗೆ ಯಾವ ತೊಂದರೆಯೂ ಆಗದಂತೆ ನಿರ್ಗಮಿಸಬಹುದಾಗಿದೆ. ಎರಡನೆಯದಾಗಿ ಇವಿಎಂಗಳನ್ನು ತಯಾರಿಸುವ ಕಂಪನಿಗಳು (ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್) ಕೇಂದ್ರ ಸರ್ಕಾರದ ಒಡೆತನಕ್ಕೆ ಒಳಪಟ್ಟಂತಹವು.

ಚುನಾವಣಾ ಆಯೋಗವು ಬಿಡುಗಡೆ ಮಾಡುವ ದಾಖಲಾದ ಮತಗಳು ಮತ್ತು ಎಣಿಕೆಯಾದ ಮತಗಳ ನಡುವೆ ಹಲವು ಬಾರಿ ಸಣ್ಣ ಪ್ರಮಾಣದ ವ್ಯತ್ಯಾಸಗಳು ಕಂಡುಬಂದಿವೆ. ಉದಾಹರಣೆಗೆ 2019ರ ಲೋಕಸಭಾ ಚುನಾವಣೆಯ ನಂತರ, ಕೆಲವು ಕ್ಷೇತ್ರಗಳಲ್ಲಿ ಚಲಾವಣೆಯಾದ ಒಟ್ಟು ಮತಗಳಿಗಿಂತ ಎಣಿಕೆಯಾದ ಮತಗಳ ಸಂಖ್ಯೆ ಹೆಚ್ಚಿರುವುದು ಅಥವಾ ಕಡಿಮೆಯಿರುವುದು ವರದಿಯಾಗಿತ್ತು. ಆದರೆ ಈವರೆಗೂ ಇಂತಹ ವ್ಯತ್ಯಾಸಗಳು ಏಕೆ ಆಗಿದೆ ಎಂಬ ಬಗ್ಗೆ ತಾಂತ್ರಿಕವಾಗಿ ಪಾರದರ್ಶಕ ವಿವರಣೆಗಳು ಚುನಾವಣಾ ಆಯೋಗ ಸಾರ್ವಜನಿಕರಿಗೆ ನೀಡಿಲ್ಲ.

ಇವಿಎಂಗಳು ಇಂಟರ್ನೆಟ್‌ಗೆ ಸಂಪರ್ಕ ಹೊಂದಿಲ್ಲದ ಕಾರಣ ಹ್ಯಾಕ್ ಮಾಡಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತದೆಯಾದರೂ, ಹಾರ್ಡ್‌ವೇರ್ ಮಟ್ಟದಲ್ಲಿ ಬದಲಾವಣೆ ಮಾಡುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಜರ್ಮನಿ ಮತ್ತು ನೆದರ್‌ಲ್ಯಾಂಡ್ ಮೊದಲಾದ ದೇಶಗಳಲ್ಲಿ ಪಾರದರ್ಶಕತೆ ಕೊರತೆ ಇದೆ ಎಂಬ ಕಾರಣಕ್ಕೆ ಇವಿಎಂಗಳನ್ನು ನಿಷೇಧಿಸಿ ಮತ್ತೆ ಪೇಪರ್ ಬ್ಯಾಲೆಟ್ ಬಳಸಲಾಗುತ್ತಿದೆ. ಭಾರತದಲ್ಲಿ ಚಿಪ್‌ಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳುವುದರಿಂದ, ಪೂರೈಕೆ ಸರಪಳಿಯ ಸಮಯದಲ್ಲಿ ಹಸ್ತಕ್ಷೇಪ ನಡೆಯುವುದಿಲ್ಲ ಎಂದು ಖಚಿತವಾಗಿ ಹೇಳಲಾಗದು.

ಇವೆಲ್ಲವುದಕ್ಕೂ ಮುಖ್ಯವಾಗಿ ಸ್ಟ್ರಾಂಗ್ ರೂಮ್‌ಗಳಲ್ಲಿ ಇವಿಎಂ ಸುರಕ್ಷಿತವೇ? ಇತ್ತೀಚಿಗಷ್ಟೇ ಪಶ್ಚಿಮ ಬಂಗಾಳದಲ್ಲಿ ಸ್ಟ್ರಾಂಗ್ ರೂಮ್‌ಗಳ ಸೀಲ್ ತೆಗೆದಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇನ್ನು 2021ರಲ್ಲಿ ಅಸ್ಸಾಂ ಚುನಾವಣೆಯ ಸಂದರ್ಭದಲ್ಲಿ, ಬಿಜೆಪಿ ಅಭ್ಯರ್ಥಿಯೊಬ್ಬರಿಗೆ ಸೇರಿದ ವಾಹನದಲ್ಲಿ ಇವಿಎಂ ಪತ್ತೆಯಾದಾಗ ದೊಡ್ಡ ವಿವಾದವಾಗಿತ್ತು. ನಂತರ ಚುನಾವಣಾ ಆಯೋಗವು ನಾಲ್ವರು ಅಧಿಕಾರಿಗಳನ್ನು ಅಮಾನತುಗೊಳಿಸಿ ಆ ಮತಗಟ್ಟೆಯಲ್ಲಿ ಮರುಮತದಾನಕ್ಕೆ ಆದೇಶಿಸಿತ್ತು. ಆದರೆ ಇದು ಬೆಳಕಿಗೆ ಬಂದ ಘಟನೆಯಾದರೆ ಅದೆಷ್ಟೋ ಅಕ್ರಮ ತೆರೆಮರೆಯಲ್ಲೇ ನಡೆದಿರಬಹುದಲ್ಲವೇ?


ಉತ್ತರ ಪ್ರದೇಶದ ಒಂದು ಎಣಿಕೆ ಕೇಂದ್ರದ ಬಳಿ ಕಸದ ಗಾಡಿಯಲ್ಲಿ ಇವಿಎಂ ಬಾಕ್ಸ್ ಗಳು ಪತ್ತೆಯಾದಾಗ ದೊಡ್ಡ ಗದ್ದಲವಾಗಿತ್ತು. ಅಧಿಕಾರಿಗಳು ಅವುಗಳನ್ನು ಖಾಲಿ ಬಾಕ್ಸ್ ಗಳೆಂದು ಹೇಳಿದರೂ, ಕಾರ್ಯವಿಧಾನದ ಪ್ರಕಾರ ಅವುಗಳನ್ನು ಆ ರೀತಿ ಎಸೆಯುವಂತಿಲ್ಲ. ಮಧ್ಯಪ್ರದೇಶದಲ್ಲಿ 2018ರ ಚುನಾವಣೆಯ ಸಮಯದಲ್ಲಿ, ಸಾಗರ್ ಜಿಲ್ಲೆಯಲ್ಲಿ ಸ್ಟ್ರಾಂಗ್ ರೂಮ್‌ಗೆ ತಡವಾಗಿ ಇವಿಎಂಗಳನ್ನು ತಂದ ಆರೋಪ ಕೇಳಿಬಂದಿತ್ತು. ಅಲ್ಲದೆ, ಸುಮಾರು ಒಂದೂವರೆ ಗಂಟೆಗಳ ಕಾಲ ಸಿಸಿಟಿವಿ ಕ್ಯಾಮೆರಾಗಳು ಬಂದ್ ಆಗಿದ್ದವು. ಇದು ''ವಿದ್ಯುತ್ ವ್ಯತ್ಯಯ'' ಎಂದು ಅಧಿಕಾರಿಗಳು ಸಮರ್ಥಿಸಿಕೊಂಡರೂ, ಅಭ್ಯರ್ಥಿಗಳು ಇದನ್ನು ಅಕ್ರಮ ಎಂದು ಪ್ರತಿಭಟಿಸಿದ್ದರು.

ಕಳವು ಮಾಡಲಾದ ಇವಿಎಂಗಳಿಂದ ಆಬ್ಜೆಕ್ಟ್ ಕೋಡ್‌ನ್ನು ರಿವರ್ಸ್ ಕಂಪೈಲ್ ಮಾಡಿ ಇವಿಎಂ ದುರ್ವರ್ತಿಸುವಂತೆ ಮಾಡುವುದು ನುರಿತ ಹ್ಯಾಕರ್‌ಗೆ ಅಸಾಧ್ಯವೇನೂ ಅಲ್ಲ. ಇಸಿಐ, ಬಿಇಎಲ್ ಹಾಗು ಇಸಿಐಎಲ್‌ನಿಂದ ಸುಮಾರು 19 ಲಕ್ಷ ಇವಿಎಂಗಳು ನಾಪತ್ತೆಯಾಗಿವೆ ಎಂಬ ಉತ್ತರವನ್ನು ಆರ್‌ಟಿಐ ಪ್ರಶ್ನೆಯೊಂದಕ್ಕೆ ಒದಗಿಸಲಾಗಿದೆ. ಕ್ಷೇತ್ರ, ವೋಟುಗಳನ್ನು ಯಾವ ಪಕ್ಷದಿಂದ ಕದಿಯಬೇಕು, ಯಾವ ಪಕ್ಷವನ್ನು ಅನುಗ್ರಹಿಸಬೇಕು, ದಿನಾಂಕ, ಸಮಯ, ಮತದಾನ ದರ ಮುಂತಾದ ಹಲವು ಅಂಶಗಳನ್ನು ಮ್ಯಾಲ್ವೇರ್‌ನಿಂದ ಮಾಡಿಸಬಹುದು. ಹೀಗಾಗಿ ಪ್ರೋಗ್ರ್ಯಾಮ್ ಲಾಜಿಕ್ ಮತ್ತು ಬಳಸಲಾದ ಪ್ಯಾರಮೀಟರ್‌ಗಳ ಅರಿವಿಲ್ಲದೆ ಇವಿಎಂ ದುರ್ವರ್ತನೆಯನ್ನು ಮುಂದಾಗಿಯೇ ಗ್ರಹಿಸುವುದು ಸಾಧ್ಯವಿಲ್ಲ.

ಇನ್ನೊಂದೆಡೆ ಇವಿಎಂಗಳ ಕಾರ್ಯಕ್ಷಮತೆಯನ್ನು ಸ್ವತಂತ್ರ ಸಂಸ್ಥೆಗಳು ಅಥವಾ ವಿರೋಧ ಪಕ್ಷದ ತಾಂತ್ರಿಕ ತಂಡಗಳು ಮುಕ್ತವಾಗಿ ಪರೀಕ್ಷಿಸಲು ಚುನಾವಣಾ ಆಯೋಗವು ಪೂರ್ಣ ಅವಕಾಶ ನೀಡುತ್ತಿಲ್ಲ. ಇವಿಎಂ ಹ್ಯಾಕ್ ಚಾಲೆಂಜ್‌ನಂತಹ ಸಂದರ್ಭಗಳಲ್ಲಿ ಕಠಿಣ ನಿಯಮಗಳನ್ನು ಹೇರಲಾಗುತ್ತದೆ. ಆದರೆ ಇದು ನಿಜವಾದ ಪಾರದರ್ಶಕತೆಗೆ ಅಡ್ಡಿಯಾಗುತ್ತದೆ ಅಲ್ಲವೇ?

ಈ ಸಂದರ್ಭದಲ್ಲಿ ಆಂಧ್ರಪ್ರದೇಶದಲ್ಲಿ ಆರು ಸೆಕೆಂಡುಗಳಿಗೊಂದು ಮತದಾನ ನಡೆದಿದೆ ಎಂಬ ಖ್ಯಾತ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಬಿಚ್ಚಿಟ್ಟ ಮಾಹಿತಿಯನ್ನೂ ನೆನೆಪಿಸಿಕೊಳ್ಳೋಣ. ''ಇವಿಎಂ ಯಂತ್ರವೊಂದು ಮರುಹೊಂದಾಣಿಕೆ ಆಗುವುದಕ್ಕೆ ಕನಿಷ್ಠ 14 ಸೆಕೆಂಡ್ ಬೇಕಾಗುತ್ತದೆ. ಹಾಗಿರುವಾಗ ಕೇವಲ 6 ರಿಂದ 20 ಸೆಕೆಂಡುಗಳ ಅಂತರದಲ್ಲಿ ಒಂದು ಮತ ಚಲಾಯಿಸಲು ಹೇಗೆ ಸಾಧ್ಯ'' ಎಂದು ಪ್ರಭಾಕರ್ ಎತ್ತಿದ್ದ ಪ್ರಶ್ನೆಯನ್ನು ನಾವೂ ಪದೇ ಪದೇ ಎತ್ತುವ ಅವಶ್ಯಕತೆಯಿದೆ. ಒಬ್ಬ ಮತದಾರ ಮತಗಟ್ಟೆಯೊಳಗೆ ಹೋಗಿ ಅಲ್ಲಿ ತಮ್ಮ ಗುರುತಿನ ಚೀಟಿ ತೋರಿಸಿ ಅಧಿಕಾರಿಗಳು ತಿಳಿಸಿದ್ದಲ್ಲಿ ಸಹಿ ಮಾಡಿ, ಮತದಾನ ಮಾಡಿದ ಸಂಕೇತವಾಗಿ ಬೆರಳಿಗೆ ಗುರುತು ಹಾಕಿಸಿ, ಗುಂಡಿ ಒತ್ತಿ ಹೊರಬರಲು ಬರೀ ಆರು ಸೆಕೆಂಡು ಸಾಕಾಗುತ್ತದೆಯೇ?

ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತ ಪತ್ರಗಳನ್ನು ತಿರುಚಿ ವ್ಯವಸ್ಥಿತ ಅಪರಾಧ : ಡಿಸಿಎಂ



ಬೆಂಗಳೂರು, ಮೇ 3-

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಅಂಚೆ ಮತ ಪತ್ರಗಳನ್ನು ತಿರುಚುವ ಮೂಲಕ ವ್ಯವಸ್ಥಿತವಾದ ಅಪರಾಧ ಚಟುವಟಿಕೆ ನಡೆಸಿರುವುದು ದೇಶದಲ್ಲೇ ದೊಡ್ಡ ಉದಾಹರಣೆಯಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ಇಡೀ ರಾತ್ರಿ ಮರು ಮತ ಎಣಿಕೆ ಸಂದರ್ಭದಲ್ಲಿನ ಬೆಳವಣಿಗೆಗಳನ್ನು ಗಮನಿಸಿದ್ದೇನೆ. ಮಾಜಿ ಶಾಸಕ ಜೀವರಾಜ್ ಅವರು, ತಮ ಬಳಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳನ್ನು ಯಾವ ರೀತಿ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬುದು ದೇಶಕ್ಕೆ ದೊಡ್ಡ ಸಾಕ್ಷಿಯಾಗಿದೆ. ಈ ಬಗ್ಗೆ ನನಗೆ ವರದಿ ಬಂದಿದೆ. ಅದನ್ನು ಅಧ್ಯಯನ ಮಾಡುತ್ತಿದ್ದೇನೆ ಎಂದರು.

ಅಂಚೆ ಮತಪತ್ರಗಳಿದ್ದ ಬಾಕ್ಸ್ ಗಳನ್ನು ತೆರೆಯುವುದು, ಮತಪತ್ರಗಳನ್ನು ತಿರುಚುವುದು ನಂತರ ನ್ಯಾಯಾಲಯಕ್ಕೆ ಹೋಗಿ ಮರು ಎಣಿಕೆ ಆದೇಶ ತರುವುದು, ವ್ಯವಸ್ಥಿತವಾದ ಹುನ್ನಾರವಾಗಿದ್ದು ಅಪರಾಧವೂ ಆಗಿದೆ ಎಂದರು.

ಈ ಹಿಂದೆ ಅವರದೇ ಏಜೆಂಟ್ ಸಮುಖದಲ್ಲಿ ಮತ ಎಣಿಕೆಯಾಗಿತ್ತು. ಆ ಸಂಬಂಧಪಟ್ಟಂತೆ ಒಪ್ಪಿತ ಸಹಿಗಳನ್ನು ಪಡೆಯಲಾಗಿತ್ತು. ಆದರೆ ಜೀವರಾಜ್ ಅವರು ಕೋರ್ಟ್‌ಗೆ ಹೋಗಿ ನಾನಾ ರೀತಿಯ ಪ್ರಯತ್ನ ಮಾಡಿದ್ದಾರೆ. ಇದರ ವಿರುದ್ಧ ಕಾನೂನು ಸಮರ ನಡೆಸಿದ್ದೇವೆ. ಸರ್ಕಾರದ ವತಿಯಿಂದಲೂ ಕಾನೂನು ಸಮರಕ್ಕೆ ಏನೆಲ್ಲಾ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಪರಿಶೀಲಿಸುವುದಾಗಿ ಹೇಳಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR